ಮಾನ್ಯ ಅಧ್ಯಕ್ಷರಾದವರು ನೋಡಬೇಕು. ತಾವು ಅದನ್ನು ನೋಡಿ ಸರ್ಕಾರಕ್ಕೆ ಒಂದು ವರದಿಯನ್ನು ಕೊಡಿಸಿ, ಅನುಕೂಲ ಮಾಡಿಕೊಡತಕ್ಕಂಥದ್ದು ತಮ್ಮ ಕರ್ತವ್ಯ. ಕನಿಷ್ಠ ಅವರು ನಂಬಿಕೊಂಡು ಬದುಕಿರತಕ್ಕಂಥ ಅವರ ಪತ್ನಿಗೆ, ಕನಿಷ್ಠ ಅವರು ಬದುಕುವವರಿಗೆ ಏನಾದರೂ ಒಂದು ಸಹಾಯವನ್ನು ಹಣದ ರೂಪದಲ್ಲಿ ನಾವು ಅವರಿಗೆ ಮಾಡಬೇಕಾಗುತ್ತದೆ. ಆ ದೃಷ್ಟಿಯಿಂದ ತಾವು ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ, ಎಲ್ಲಾ ವಿರೋಧ ಪಕ್ಷದವರೊಂದಿಗೆ ಸಭೆಯೊಂದನ್ನು ಕರೆಯಿರಿ. ಸದನ ಮುಗಿದ ನಂತರವೋ ಅಥವಾ ಅನಂತರವೋ ತಾವು ಸಭೆಯನ್ನು ಕರೆದು ಒಂದು ತೀರ್ಮಾನ ಮಾಡಿ. ಕನಿಷ್ಠ ಅವರು ಬದುಕಿರುವವರಿಗಾದರೂ ಏನಾದರು ಒಂದು ಕೊಡಬೇಕು ಎನ್ನುವಂತಹ ಸ್ಪಷ್ಟವಾದಂತಹ ತೀರ್ಮಾನ ತಮ್ಮ ಕಾಲದಲ್ಲಾದರೂ ಆಗಲಿ ಎಂದೂ ನಾನು ಸಹ ಒತ್ತಾಯ ಮಾಡುತ್ತೇನೆ. ಎಲ್ಲರ ಜೊತೆಯಲ್ಲಿ ಧ್ವನಿಗೂಡಿಸುತ್ತಿದ್ದೇನೆ. ದಯವಿಟ್ಟು ತಾವು ಈ ಕೆಲಸವನ್ನು ಮಾಡಬೇಕು ಎಂದು ಕಳಕಳಿಯಿಂದ ಮನವಿ ಮಾಡಿ, ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಸದನವು ಮೃತರ ಗೌರವಾರ್ಥ ಒಂದು ನಿಮಿಷ ಮೌನವನ್ನಾಚರಿಸಿತು)

2) ಅಭಿನಂದನಾ ನಿರ್ಣಯ

ವಿಷಯ : ಕರ್ನಾಟಕದ ಖ್ಯಾತ ಲೆಗ್ ಸ್ಪಿನ್ನರ್ ಶ್ರೀ ಅನಿಲ್ ಕುಂಬ್ಳೆಯವರು ಟೆಸ್ಟ್ ಕ್ರಿಕೆಟ್‌ನಲ್ಲಿ ಐದು ನೂರನೇ ವಿಕೆಟ್ ಗಳಿಸಿದ ಸಂದರ್ಭದಲ್ಲಿ ಸದನದ ಅಭಿನಂದನೆ.

ಅಧ್ಯಕ್ಷರು : ರಾಜ್ಯದ ಕ್ರೀಡಾ ಪಟು ಲೆಗ್ ಸ್ಪಿನ್ನರ್ ಅನಿಲ್ ಕುಂಬ್ಳೆಯವರು ಮೊಹಾಲಿಯಲ್ಲಿ ಇಂಗ್ಲೆಂಡ್ ವಿರುದ್ಧ ನಡೆದ ಎರಡನೇ ಕ್ರಿಕೆಟ್ ಟೆಸ್ಟ್‌ನಲ್ಲಿ ಐನೂರನೇ ವಿಕೆಟ್ ಗಳಿಸಿದ ಮೊದಲ ಭಾರತೀಯ ಕ್ರಿಕೆಟಿಗರೆನಿಸಿದ್ದಾರೆ. ಈ ಸಾಧನೆ ಮಾಡಿದ ಜಗತ್ತಿನ ಐದನೇ ಬೌಲರ್ ಎಂಬ ಹಿರಿಮೆಗೆ ಪಾತ್ರರಾದುದು ಪ್ರಶಂಸನಾರ್ಹ. ಅವರ ಈ ಸಾಧನೆ ಕೇವಲ ಈ ಕರ್ನಾಟಕಕ್ಕೆ ಸೀಮಿತಗೊಳ್ಳದೆ, ಭಾರತದ ಎಲ್ಲಾ ಪ್ರಜೆಗಳೂ ಹೆಮ್ಮೆ ಪಡುವಂತಾಗಿದೆ. ಅವರಿಗೆ ಜೀವನದಲ್ಲಿ ಇನ್ನೂ ಹೆಚ್ಚಿನ ಯಶಸ್ಸು ದೊರಕಿ, ಅವರ ಸೇವೆ ಈ ದೇಶಕ್ಕೆ ಒದಗಿ ಬರಲೆಂದು ಈ ಸಂದರ್ಭದಲ್ಲಿ ಸದನದ ಸದಸ್ಯರ ಹಾಗೂ ಕರ್ನಾಟಕ ಜನತೆಯ ಪರವಾಗಿ ಹಾರೈಸುತ್ತೇನೆ.

(ಸದನದ ಸದಸ್ಯರು ಮೇಜು ಕುಟ್ಟುವ ಮೂಲಕ ಅಭಿನಂದನಾ ನಿರ್ಣಯವನ್ನು ಸ್ವಾಗತಿಸಿದರು)

+ಶ್ರೀ ಡಿ.ಕೆ. ಶಿವಕುಮಾರ್ (ಕನಕಪುರ) : ಮಾನ್ಯ ಅಧ್ಯಕ್ಷರೆ, ತಾವೇನು ಅಭಿನಂದನಾ ನಿರ್ಣಯವನ್ನು ಮಂಡಿಸಿದ್ದೀರಿ. ಇದನ್ನು ಸ್ವಾಗತಿಸುತ್ತೇನೆ. ಇದು ನಮ್ಮ ರಾಜ್ಯಕ್ಕೆ ಅನಿಲ್ ಕುಂಬ್ಳೆಯವರು ತಂದುಕೊಟ್ಟಂತಹ ಒಂದು ದೊಡ್ಡ ಗೌರವವಾಗಿದೆ. ಈ ರಾಜ್ಯದಲ್ಲಿ ಜನಿಸಿ, ಒಬ್ಬ ಕನ್ನಡಿಗನಾಗಿ, ಅವರು ಈ ಒಂದು ಕ್ರಿಕೆಟ್ ರಂಗದಲ್ಲಿ ನಮಗೆ ಮತ್ತು ರಾಷ್ಟ್ರಕ್ಕೆ ಒಂದು ದೊಡ್ಡ ಗೌರವವನ್ನು ತಂದಿದ್ದಾರೆ. ಮನುಷ್ಯ ಹುಟ್ಟಿದ ಮೇಲೆ, ನಾನು ಹಿಂದೆಯೂ ಈ ಸದನದಲ್ಲಿ ಹೇಳಿದ್ದೆ.

+ ಈ ಭಾಷಣವು ಮಾನ್ಯ ಸದಸ್ಯರಿಂದ ಪರಿಶೀಲಿಸಲ್ಪಟ್ಟಿದೆ.

ಹುಟ್ಟು ಆಕಸ್ಮಿಕ, ಸಾವು ಅನಿವಾರ್ಯ, ಜನನ ಉಚಿತ, ಮರಣ ಖಚಿತ. ಈ ಹುಟ್ಟು ಸಾವಿನ ಮಧ್ಯದಲ್ಲಿ ಯಾರು ಏನು ಸಾಧನೆ ಮಾಡುತ್ತಾರೋ ಎಂಬುದು ಬಹಳ ಮುಖ್ಯವಾದ ವಿಚಾರವಾಗುತ್ತದೆ. ಇಡೀ ರಾಜ್ಯದ ಯುವಕ ಮಾತ್ರವಲ್ಲ, ನಾವೆಲ್ಲಾ ಜನಪ್ರತಿನಿಧಿಗಳೂ ಕೂಡ ಇವತ್ತು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇವೆ. ಈ ಒಂದು ಯುವ ಪೀಳಿಗೆಗೆ ಅವರು ದೊಡ್ಡ ಮಾರ್ಗದರ್ಶಕರಾಗಿದ್ದಾರೆ. ಮುಂದಿನ ಯುವಕರಿಗೆ ಏನೊಂದು ಅವಕಾಶ ವಿವಿಧ ರಂಗದಲ್ಲಿ ಸಿಗುತ್ತದೋ, ಅಲ್ಲಿ ಅವರು ಸಾಧನೆ ಮಾಡಿದಂತಹ ಸಂದರ್ಭದಲ್ಲಿ ಅದನ್ನು ಪ್ರಶಂಸೆ ಮಾಡಬೇಕಾದುದು ನಮ್ಮೆಲ್ಲರ ಕರ್ತವ್ಯ. ಈ ದಿಕ್ಕಿನಲ್ಲಿ ಸರ್ಕಾರ ಮತ್ತು ತಾವು ಕೂಡ ಒಂದು ನಿರ್ಣಯವನ್ನು ಮಂಡಿಸಿದ್ದೀರಿ. ನಾನು ಸರ್ಕಾರಕ್ಕೆ ನನ್ನ ಚಿಕ್ಕ ಸಲಹೆ ನೀಡುವುದು ಏನೆಂದರೆ, ಅನಿಲ್ ಕುಂಬ್ಳೆಯವರನ್ನು ನಾನು ಅನೇಕ ಸಂದರ್ಭಗಳಲ್ಲಿ ಭೇಟಿ ಮಾಡಿದ್ದೇನೆ. ರಾಜ್ಯ ಸರ್ಕಾರ ಕೂಡ ಹಿಂದೆ ಅವರಿಗೆ ಒಂದು ದೊಡ್ಡ ಗೌರವವನ್ನು ಕೊಟ್ಟಿದೆ. ಹಾಗೆ ಗೌರವ ಕೊಡುವ ಸಂದರ್ಭದಲ್ಲಿ ನಾವೆಲ್ಲಾ ಪಾತ್ರರಾಗಿದ್ದೇವೆ. ಅವರ ಆಸೆ ಏನಿದೆ ಎಂದರೆ, ಒಂದು ಕ್ರೀಡಾ ಅಕಾಡೆಮಿ ಮಾಡಬೇಕು. ಕ್ರಿಕೆಟ್ ಅಕಾಡೆಮಿ ಮಾಡಬೇಕು. ಅವರಲ್ಲಿ ಏನು ಶಕ್ತಿ ಇದೆ. ಆ ಶಕ್ತಿ ಮತ್ತು ವಿದ್ಯೆ ಅನುಭವ ಏನಿದೆ ಅದನ್ನು ಅವರು ಹತ್ತಾರು ಯುವಕರಿಗೆ ಕಲಿಸುವುದರ ಮೂಲಕ ಅವರನ್ನು ತಯಾರು ಮಾಡಬೇಕೆಂಬ ಆಸೆ ಇದೆ. ನನಗೆ ಸರ್ಕಾರ ಒಂದು ಕ್ರೀಡಾ ಅಕಾಡೆಮಿಗೆ ಬೇಕಾದ 10 ಎಕರೆ ಜಾಗವನ್ನು ಕೊಡಲಿಲ್ಲ ಎನ್ನುವುದು ಅವರ ಮನಸ್ಸಿನಲ್ಲಿ ಇದೆ. ದಯವಿಟ್ಟು ತಾವು ಸರ್ಕಾರಕ್ಕೆ ಸೂಚಿಸಿ ತಮ್ಮ ಮುಖಾಂತರ ಎಲ್ಲಾದರೂ ಬೆಂಗಳೂರಿನ ಸುತ್ತ ಮುತ್ತ ಕ್ರೀಡಾ ಅಕಾಡೆಮಿ ಮಾಡಿ ಯುವಕರನ್ನು ಪ್ರೋತ್ಸಾಹಿಸಿ ಅವರಲ್ಲಿ ಏನು ನೈಪುಣ್ಯತೆ ಇದೆ ಅದನ್ನು ತಯಾರು ಮಾಡಲಿಕ್ಕೆ ಅವರಿಗೆ ಒಂದು ಅವಕಾಶ ಮಾಡಿ ಕೊಡಲು ಸರ್ಕಾರ 10 ಎಕರೆ ಜಮೀನನ್ನು ಉಚಿತವಾಗಿ ಮಂಜೂರು ಮಾಡಿದ್ದೇ ಆದರೆ ಬಹುಶಃ ಅವರು ಏನು ಒಂದು ಕಲಿತಿದ್ದಾರೆ. ಏನು ಸಾಧನೆ ಮಾಡಿದ್ದಾರೆ. ಆ ಸಾಧನೆ ಮತ್ತು ಅವರ ಅನುಭವ ಮುಂದಿನ ಯುವಕರಿಗೆ ತರಬೇತಿ ಕೊಟ್ಟು ತಯಾರು ಮಾಡಲಿಕ್ಕೆ ಅನುಕೂಲವಾಗುತ್ತದೆ. ಇದರಿಂದ ಮುಂದಕ್ಕೆ ಕೂಡ ನಮ್ಮ ರಾಜ್ಯದ ಅನೇಕ ಯುವಕರು ರಾಜ್ಯಮಟ್ಟದಿಂದ ರಾಷ್ಟ್ರ ಮಟ್ಟಕ್ಕೆ ಹೋಗಲಿಕ್ಕೆ ಅನುಕೂಲವಾಗುತ್ತದೆ. ಹಿಂದಿನ ಸರ್ಕಾರಗಳು ವಿವಿಧ ರೀತಿಯಲ್ಲಿ ಬೇಕಾದಷ್ಟು ಸಹಾಯ ಮಾಡಿದೆ. ತಾವು ದೊಡ್ಡ ಮನಸ್ಸು ಮಾಡಿ ಸರ್ಕಾರ 10 ಎಕರೆ ಜಾಗವನ್ನು ಕೊಟ್ಟು ಎಲ್ಲ ಸೌಲಭ್ಯವನ್ನು ಕೊಟ್ಟು ಅನುಕೂಲ ಮಾಡಿಕೊಡಬೇಕು. ಲೀಸ್ ಬೇಡ ಉಚಿತವಾಗಿ ಕೊಡಲಿ. ಫ್ರೀ ಗ್ಯಾಂಟ್ಸ್ ನಾವು ಯಾವ್ಯಾವುದಕ್ಕೋ ಕೊಡುತ್ತೇವೆ. ಕ್ರೀಡಾ ಅಕಾಡೆಮಿ ಸ್ಥಾಪನೆ ಮಾಡಲಿಕ್ಕೆ ಅನುಕೂಲ ಮಾಡಿಕೊಡಲಿಕ್ಕೆ ತಾವು ಸಹಾಯ ಮಾಡಬೇಕೆಂದು ವಿನಂತಿ ಮಾಡುತ್ತೇನೆ. ಇಲ್ಲ ರೆವಿನ್ಯೂ ಮಂತ್ರಿಗಳಿದ್ದೀರಿ. ತಾವು ಹೊಸದಾಗಿ ಜವಾಬ್ದಾರಿಯನ್ನು ವಹಿಸಿಕೊಂಡಿದ್ದೀರಿ. ಉತ್ತಮವಾದ ಜಾಗವನ್ನು ಗುರುತಿಸಿ ದಾನ ಕೊಡಲಿಕ್ಕೆ ತಮಗೆ ದೊಡ್ಡ ಅವಕಾಶ ಸಿಕ್ಕಿದೆ. ಸರ್ಕಾರ ಈ ವ್ಯವಸ್ಥೆ ಮಾಡಬೇಕೆಂದು ಸರ್ಕಾರದವರಲ್ಲಿ ತಮ್ಮ ಮುಖಾಂತರ ಮನವಿ ಮಾಡುತ್ತೇನೆ.

ಶ್ರೀ ದಿನೇಶ್ ಗುಂಡೂರಾವ್(ಗಾಂಧಿನಗರ) : ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ತಾವು ಮಂಡಿಸಿರತಕ್ಕಂತಹ ಅಭಿನಂದನಾ ನಿರ್ಣಯದ ಮೇಲೆ ಮಾತನಾಡುತ್ತಾ ಮಾನ್ಯ ಶಿವಕುಮಾರ್‌ರವರು ಏನು ಹೇಳಿದ್ದಾರೆ ಅದಕ್ಕೆ ನಾನೂ ಕೂಡ ಧ್ವನಿಗೂಡಿಸುತ್ತೇನೆ. ಅನಿಲ್ ಕುಂಬ್ಳೆಯವರ ಬಗ್ಗೆ ಬಹುಶಃ ನಾವೇನೂ ಹೆಚ್ಚು ಹೇಳಬೇಕಾಗಿಲ್ಲ. ಅವರು ಇಡೀ ವಿಶ್ವದಲ್ಲಿ ಇವತ್ತು

ಒಬ್ಬ ಅತ್ಯುತ್ತಮವಾದ ಕ್ರೀಡಾ ಪಟು ಆಗಿದ್ದಾರೆ. ಮತ್ತು ನಮ್ಮ ರಾಷ್ಟ್ರಕ್ಕೆ ಕೂಡ ಅದೇ ರೀತಿಯಲ್ಲಿ ಒಂದು ಗೌರವ ತರತಕ್ಕಂತಹ ವ್ಯಕ್ತಿ ಆಗಿದ್ದಾರೆ. ಬಹುಶಃ ಇಡೀ ಭಾರತ ದೇಶದ ಇತಿಹಾಸದಲ್ಲಿ ಯಾವ ಬೌಲರ್ ಕೂಡ ಇಷ್ಟೊಂದು ವಿಕೆಟ್ ತೆಗೆದುಕೊಂಡಿರಲಿಲ್ಲ. ಅಷ್ಟೊಂದು ವಿಕೆಟ್ ಅವರು ತೆಗೆದುಕೊಂಡಿದ್ದಾರೆ. ಹಿಂದೆ ಅವರು ವಿಶ್ವ ದಾಖಲೆ ಕೂಡ ಮಾಡಿದ್ದಾರೆ. ಒಂದೇ ಇನ್ನಿಂಗ್ಸ್‌ನಲ್ಲಿ 10 ವಿಕೆಟ್‌ಗಳನ್ನು ತೆಗೆದುಕೊಂಡು ವಿಶ್ವ ದಾಖಲೆ ಮಾಡಿದ ಮಹಾನ್ ಕ್ರೀಡಾ ಪಟು. ಅವರನ್ನು ಅಭಿನಂದನೆ ಮಾಡುವ ಸಂದರ್ಭದಲ್ಲಿ ನಾನು ಹೇಳಬೇಕಾದುದು ಏನೆಂದರೆ, ಮಾನ್ಯ ಅಧ್ಯಕ್ಷರೆ, ಕ್ರೀಡೆಗೆ ಬಹುಶಃ ನಮ್ಮ ರಾಜ್ಯದಲ್ಲಿ ಯಾವ ನಿಟ್ಟಿನಲ್ಲಿ ಪ್ರೋತ್ಸಾಹ ಸಿಗಬೇಕಾಗಿತ್ತು. ಅದು ಸಿಗುತ್ತಿಲ್ಲವೆಂದು ಎಲ್ಲೋ ಒಂದು ಕಡೆ ನಮ್ಮ ಮನಸ್ಸಿನಲ್ಲಿ ಬರುತ್ತದೆ. ಇವತ್ತು ಕ್ರೀಡೆಯ ವಿಚಾರಕ್ಕೆ ನಾವು ಹೆಚ್ಚು ಪ್ರೋತ್ಸಾಹ ಏಕೆ ಕೊಡಬೇಕೆಂದರೆ, ಕ್ರೀಡೆಯಲ್ಲಿ ಯಾವುದೇ ರೀತಿಯ ಜಾತಿ, ಧರ್ಮ, ಯಾವ ಬೇಧ ಭಾವ ಬರುವುದಿಲ್ಲ. ವ್ಯತ್ಯಾಸಗಳು ಬರುವುದಿಲ್ಲ. ರಾಷ್ಟ್ರವನ್ನು ಒಗ್ಗೂಡಿಸತಕ್ಕಂತಹ ಕೆಲಸದಲ್ಲಿ ಕ್ರೀಡೆಗಳ ಪಾತ್ರ ಬಹಳ ಮುಖ್ಯವಾಗಿರುತ್ತದೆ. ಅನೇಕ ಸಾರಿ ನಾವು ಜಾತಿ ಹೆಸರಿನಲ್ಲಿ ಬೇರೆ ಬೇರೆ ಹೆಸರುಗಳಲ್ಲಿ ದೇಶ ವಿಭಜನೆ ಆಗಿರತಕ್ಕಂಥದ್ದನ್ನು ನೋಡುತ್ತೇವೆ. ಕ್ರೀಡೆಯನ್ನು ನಾವು ವೀಕ್ಷಣೆ ಮಾಡಿದಾಗ, ಒಳ್ಳೆಯ ಬೌಲರ್ ಒಳ್ಳೆಯ ಆಟಗಾರ ಇದ್ದಾಗ ನಾವೆಲ್ಲರೂ ಕೂಡ ಪ್ರಶಂಸೆ ಮಾಡುತ್ತೇವೆ. ಅವನು ಮುಸಲ್ಮಾನ, ಅವನು ಹಿಂದು ಮತ್ತು ಅವನು ದಲಿತ ಎಂದು ಯಾರೂ ಕೂಡ ನೋಡುವುದಕ್ಕೆ ಹೋಗುವುದಿಲ್ಲ. ಇದು ರಾಷ್ಟ್ರದಲ್ಲಿ ಐಕ್ಯತೆ ಮೂಡಿಸುವ ಒಂದು ದೊಡ್ಡ ಕ್ಷೇತ್ರ. ಇದಕ್ಕೋಸ್ಕರ ಹೆಚ್ಚು ಒತ್ತು ಕೊಡುವ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಳ್ಳಬೇಕಾಗುತ್ತದೆ. ಇವತ್ತು ಒಂದು ಅಕಾಡೆಮಿ ಮಾಡಬೇಕೆಂದು ಶ್ರೀ ಶಿವಕುಮಾರ್ ಸಾಹೇಬರು ಹೇಳುತ್ತಿದ್ದಾರೆ. ಇವತ್ತಿನ ದಿವಸ, ಕ್ರೀಡೆಗೆ ಯಾವ ರೀತಿಯ ಪ್ರೋತ್ಸಾಹ ನೀಡಲಾಗಿದೆ? ಕ್ರಿಕೆಟ್ ಅಲ್ಲ, ಏಕೆಂದರೆ, ಕ್ರಿಕೆಟ್‌ಗೆ ಸಾಕಷ್ಟು ಸವಲತ್ತುಗಳು ಇವೆ. ಆದರೆ ನಮ್ಮ ರಾಜ್ಯದಲ್ಲಿ ಅನೇಕ ಬೇರೆ ಬೇರೆ ಕ್ರೀಡೆಗಳು ಇವೆ. ಅದಕ್ಕೆ ಕೂಡ ಪ್ರೋತ್ಸಾಹ ಕೊಡತಕ್ಕಂಥದ್ದು ಆಗಬೇಕು. ನಮ್ಮ ಸಾಂಸ್ಕೃತಿಕ ಹಿನ್ನೆಲೆ ಇರತಕ್ಕಂತಹ ಕಬಡ್ಡಿ, ಕೊಕ್ಕೋ, ಇದೆ. ಅದಕ್ಕೆ ಎಲ್ಲಾ ಪ್ರೋತ್ಸಾಹ ಕೊಡಬೇಕಾಗಿದೆ. ನಮಗೆ ಇವತ್ತು ಒಬ್ಬ ಯುವ ಮಂತ್ರಿಗಳು ದೊರಕಿದ್ದಾರೆ. ಈ ಕ್ರೀಡಾ ಸಚಿವರ ಕಾಲದಲ್ಲಿ ಆದರೂ ಹೆಚ್ಚಿನ ಒತ್ತು ಸಿಗಲಿ ಎಂದು ಹೇಳಿ, ಅನಿಲ್ ಕುಂಬ್ಳೆಯವರಿಗೆ ಅಭಿನಂದನೆ ಸಲ್ಲಿಸುವುದು ಎಲ್ಲರೂ ಒಪ್ಪತಕ್ಕ ವಿಚಾರ. ನಾವು ಕೂಡ ಅದಕ್ಕೆ ಧ್ವನಿಗೂಡಿಸುತ್ತೇವೆ. ಕರ್ನಾಟಕ ರಾಜ್ಯ ಇವತ್ತು ಕ್ರಿಕೆಟ್‌ನಲ್ಲಿ ವಿಶೇಷವಾಗಿ ರಾಹುಲ್ ದ್ರಾವಿಡ್, ಅನಿಲ್ ಕುಂಬ್ಳೆ, ಜಾವಗಲ್ ಶ್ರೀನಾಥ್, ವೆಂಕಟೇಶ್ ಪ್ರಸಾದ್, ಮತ್ತು ಚಂದ್ರಶೇಖರ್, ಈ ರೀತಿಯ ಅನೇಕ ಮಹಾನ್ ಕ್ರೀಡಾ ಪಟುಗಳನ್ನು ನಾವು ಈ ರಾಷ್ಟ್ರಕ್ಕೆ ಕೊಟ್ಟಿದ್ದೇವೆ. ಆದರೆ ಈ ಒಂದು ಪರಂಪರೆಯನ್ನು ಇನ್ನೂ ಇವತ್ತಿನ ದಿವಸ ಬೆಳೆಸಿಕೊಂಡು ಹೋಗಬೇಕಾಗಿದೆ. ಆ ನಿಟ್ಟಿನಲ್ಲಿ ಕುಂಬ್ಳೆಯವರ ಸಾಧನೆಯ ಬಗ್ಗೆ ನಾನೂ ಕೂಡ ಪ್ರಶಂಸೆ ಮಾಡಿ, ನನ್ನ ಮಾತುಗಳನ್ನು ಮುಗಿಸುತ್ತೇನೆ. ಧನ್ಯವಾದಗಳು.

ಶ್ರೀ ಜೆ.ಸಿ. ಮಾಧುಸ್ವಾಮಿ(ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೆ, ಕರ್ನಾಟಕವು ಕ್ರಿಕೆಟ್‌ಗೆ ಬಹಳ ನೆಲೆ ಇದ್ದಂತಹ ಒಂದು ಸ್ಥಳ. ಅದರಲ್ಲಿ ಆಫ್ ಸ್ಪಿನ್ನರ್ಸ್, ಲೆಗ್ ಸ್ಪಿನ್ನರ್ಸ್ ಸೃಷ್ಟಿ ಆದಂತಹ ಜಾಗ. ನಮ್ಮ ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್ ಮತ್ತು ಈ ಭೂಮಿ. ಅದರಲ್ಲಿ ನಾವು ಇವತ್ತು ಸನ್ಮಾನ್ಯ ಕುಂಬ್ಳೆಯವರು 500 ವಿಕೆಟ್ ತೆಗೆದುಕೊಂಡು ವಿಶ್ವ ದಾಖಲೆ ಸ್ಥಾಪನೆ

ಮಾಡಿರುವುದು ನಮ್ಮ ರಾಜ್ಯಕ್ಕೆ ತಂದಿರುವ ಗೌರವ ಎಂದು ಭಾವಿಸಿ ನಾನೂ ಕೂಡ ನನ್ನ ಪರವಾಗಿ ಮತ್ತು ನನ್ನ ಪಕ್ಷದ ಪರವಾಗಿ ಅವರನ್ನು ಅಭಿನಂದನೆ ಅದರ ಜೊತೆಗೆ ಅವರ ಆಸೆ ಏನು ಇದೆ ಅದನ್ನು ಈಡೇರಿಸಬೇಕಾದುದು ನಮ್ಮ ಕರ್ತವ್ಯ. ಅವರು ವೈಯಕ್ತಿಕವಾಗಿ ಏನೂ ಕೇಳಲಿಲ್ಲ. ಇಲ್ಲಿ ಒಂದು ಸಂಸ್ಥೆ ಸ್ಥಾಪನೆ ಮಾಡಿ ಮುಂಬರುವ ಮಕ್ಕಳಿಗೆ ಸಹಾಯವಾಗುತ್ತದೆ. ಎಂದರೆ ಮಾಡಬೇಕಾಗುತ್ತದೆ. ಅವತ್ತು ವಿವೇಕಾನಂದ ಸ್ವಾಮಿಯವರು ಮಾಡಿದಂತಹ ಒಂದು ದೊಡ್ಡ ಕಾರ್ಯ ಇವತ್ತು ಇಲ್ಲಿ ಕರ್ನಾಟಕದಲ್ಲಿ ಕ್ರೀಡಾ ಪಟುಗಳು ಬೆಳೆದು ಹೋಗಿ ಇತ್ತೀಚಿನವರೆಗೂ ಮೂರು-ನಾಲ್ಕು ಜನ ಆಟಗಾರರು ಭಾರತದ ತಂಡದಲ್ಲಿ ಇರುತ್ತಿದ್ದರು. ದುರ್ದೈವ ಇವತ್ತು ನಮ್ಮ ಕರ್ನಾಟಕದವರೇ ಕ್ಯಾಪ್ಟನ್ ಆಗಿದ್ದರೂ ಕೂಡ ಟೆಸ್ಟ್ ಕ್ರಿಕೆಟ್‌ನಲ್ಲಿ ಕುಂಬ್ಳೆಯವರು ಮತ್ತು ರಾಹುಲ್ ದ್ರಾವಿಡ್ ಅವರನ್ನು ಬಿಟ್ಟು ಆ ಮಟ್ಟಕ್ಕೆ ನಾವೂ ಕ್ರೀಡಾ ಪಟುಗಳನ್ನು ಬೆಳೆಸುವುದಕ್ಕಾಗುತ್ತಿಲ್ಲ. ಆ ಕಡೆ ಹೆಚ್ಚು ಪ್ರೋತ್ಸಾಹ ಕೊಡಲಿಕ್ಕೆ ಕುಂಬ್ಳೆಯವರ ನೆರವಿಗೆ ಸರ್ಕಾರ ಬರಬೇಕು. ಅವರು ಮಾಡಿರುವ ಸಾಧನೆಗಳನ್ನು ಮೆಚ್ಚಿಕೊಂಡು ಅದನ್ನು ಮಾಡಿ ಬರುವ ಜನರಿಗೆ ಧಾರೆ ಎರೆಯುವ ಸ್ಥಿತಿ ನಿರ್ಮಾಣ ಮಾಡಬೇಕು. ಮುಂದೆ ಬರುವ ಕರ್ನಾಟಕದ ಕ್ರಿಕೆಟ್ ಕ್ರೀಡಾ ಪಟುಗಳಿಗೆ ಕುಂಬ್ಳೆಯವರು ಮಾರ್ಗದರ್ಶಕರು ಆಗಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ ಅವರು ಅಷ್ಟೊಂದು ಕರಾರುವಾಕ್ಕಾಗಿ ಬೌಲಿಂಗ್ ಮಾಡುತ್ತಾರೆ. ಇ.ಎ.ಎಸ್. ಪ್ರಸನ್ನ ಅವರ ಮಾತನ್ನು ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಅವರು ಬಹಳ ಉತ್ತಮವಾದ ಆಫ್ ಸ್ಪಿನ್ನರ್ ಇದ್ದವರು. ಕುಂಬ್ಳೆಯವರ ಮಟ್ಟಕ್ಕೆ ಬರುವುದು ಕಷ್ಟ ಎಂದು ಅವರು ಹೇಳಿದ್ದಾರೆ. ನಾಳೆ ಬರುವ ಕ್ರೀಡಾಪಟುಗಳು ಆ ದಿಕ್ಕಿನಲ್ಲಿ ಬೆಳೆಯುವ ಸ್ಥಿತಿ ನಿರ್ಮಾಣ ಆಗಲಿ. ಕುಂಬ್ಳೆಯವರಿಗೆ ಎಲ್ಲಾ ರೀತಿಯ ಅನುಕೂಲಗಳು ಲಭ್ಯ ಆಗಲಿ ಎಂದು ನಾನು ಹಾರೈಸುತ್ತೇನೆ. ನನ್ನ ಪಕ್ಷ ಮತ್ತು ನನ್ನ ಪರವಾಗಿ ಅವರನ್ನು ಅಭಿನಂದಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗುರುಮಿಟ್ಕಲ್) : ಮಾನ್ಯ ಅಧ್ಯಕ್ಷರೆ, ತಾವು ಮಂಡಿಸಿರತಕ್ಕಂತಹ ಒಂದು ನಿರ್ಣಯಕ್ಕೆ ನಾನೂ ಕೂಡ ಬೆಂಬಲವನ್ನು ಸೂಚಿಸುತ್ತೇನೆ. ಇದು ನನ್ನೆಯೇ ಆಗಬೇಕಾಗಿತ್ತು. ಏಕೆಂದರೆ, ನಾನು ನಿರೀಕ್ಷೆ ಮಾಡಿದ್ದೆ. ಅನಿಲ್ ಕುಂಬ್ಳೆ ಅವರು 501 ವಿಕೆಟ್ ಪಡೆದುಕೊಂಡ ಮೇಲೆ ಪಾರ್ಲಿಮೆಂಟಿನಲ್ಲಿ ಕೂಡ ಸ್ಪೀಕರ್‌ರವರು ಸೋ-ಮೋಟೋ ಒಂದು ರೆಸಲ್ಯೂಷನ್ ತಕ್ಷಣ ಓದಿ ಹೇಳಿದರು. ಅದೇ ರೀತಿಯಾಗಿ ನೆನ್ನೆ ನಮ್ಮ ಸದನದಲ್ಲಿ ಬರುತ್ತದೆ ಎಂದು ನಾನು ಭಾವಿಸಿದ್ದೆ. ಆದರೆ ಇವತ್ತು ತಾವು ತೆಗೆದುಕೊಂಡಿದ್ದೀರಿ; ಸಂತೋಷದ ವಿಷಯ. ಒಂದೇ ಒಂದು ನಾನು ಹೇಳತಕ್ಕಂಥದ್ದು ಏನೆಂದರೆ, ಐದು ಜನರಲ್ಲಿ ಇವತ್ತು ಕುಂಬ್ಳೆಯವರ ಹೆಸರು ಒಂದಾಗಿದೆ. ಪ್ರಪ್ರಥಮವಾಗಿ ಶೇನ್‌ವಾರ್ನ್ ಎಂದು 600ಕ್ಕಿಂತ ಹೆಚ್ಚಿನ ವಿಕೆಟ್ ತೆಗೆದುಕೊಂಡಿರುವವರು ಇರಬಹುದು, ಅಥವಾ ಶ್ರೀಲಂಕಾದ ಮುರಳೀಧರನ್ ಅವರೂ ಕೂಡ 600 ಕ್ಕಿಂತ ಹೆಚ್ಚು ವಿಕೆಟ್ ಪಡೆದಂತಹ ವ್ಯಕ್ತಿ ಎರಡನೆಯವರು ಇರಬಹುದು. ಕುಂಬ್ಳೆ ಅವರು 501 ವಿಕೆಟ್ ಪಡೆದುಕೊಂಡು ಇವತ್ತು 5ನೇ ಕೆಟಗರಿಯಲ್ಲಿ ಇದ್ದಾರೆ. ಆದ್ದರಿಂದ ನಮ್ಮ ರಾಜ್ಯದಲ್ಲಿ ಇದಕ್ಕೆ ಸ್ವಲ್ಪ ಪ್ರೋತ್ಸಾಹ ಕೊಡತಕ್ಕಂಥದ್ದು ಒಳ್ಳೆಯದು. ಕ್ರಿಕೆಟ್ ಒಂದೇ ಎಂದು ನಾನು ಹೇಳುವುದಿಲ್ಲ. ಆಟಕ್ಕೆ ಪ್ರೋತ್ಸಾಹ ಕೊಡುವುದು ಬಹಳ ಮುಖ್ಯ. ನಾನು ಮೊನ್ನೆ ಪತ್ರಿಕೆಯಲ್ಲಿ ಓದಿದೆ. ಮಾನ್ಯ ಆಲ್ಕೋಡ್ ಹನುಮಂತಪ್ಪನವರು ಪ್ರತಿಯೊಂದು ತಾಲ್ಲೂಕಿನಲ್ಲಿ ಒಂದು ಸ್ಟೇಡಿಯಮ್ ಕಟ್ಟುತ್ತೇನೆಂದು

ಹೇಳಿದರು. ನಿಜವಾಗಿಯೂ ಪ್ರತಿಯೊಂದು ತಾಲ್ಲೂಕು ಮಟ್ಟದಲ್ಲಿ ಕೂಡ ಸ್ಟೇಡಿಯಮ್‌ನ ಅವಶ್ಯಕತೆ ಇದೆ. ಪಟ್ಟಣಗಳಲ್ಲಿಯೂ ಕೂಡ ಇದೆ. ಇವತ್ತು ಅನೇಕ ಅರ್ಬನ್ ಏರಿಯಾದಲ್ಲಿ ಆಟದ ಮೈದಾನಗಳು ಇಲ್ಲ. ಎಲ್ಲಾ ಮೈದಾನಗಳನ್ನು ಯಾರಿಗಾದರೂ ಲೀಸ್‌ಗೆ ಕೊಟ್ಟಿದ್ದಾರೆ. ಇಲ್ಲವೆಂದರೆ ಬೇರೆ ಬೇರೆ, ಟ್ರಸ್ಟ್‌ಗಳಿಗೆ ಕೊಟ್ಟಿದ್ದಾರೆ. ಹೀಗೆ ಕೊಟ್ಟು ಮಕ್ಕಳು ಆಟ ಆಡತಕ್ಕಂತಹ ಒಂದು ಪರಿಸರ ಮತ್ತು ವಾತಾವರಣವನ್ನು ನಾವು ಸೃಷ್ಟಿ ಮಾಡುತ್ತಿಲ್ಲ. ಹೀಗಾಗಿ ಇವತ್ತು ಅನೇಕ ಕಡೆ ಆಟ ಆಡತಕ್ಕಂಥದ್ದು ಮೊಟಕಾಗಿ ಹೋಗಿದೆ. ಕ್ರಿಕೆಟ್ ಎಂದರೆ ಇದು ಸ್ವಲ್ಪ ಹೆಚ್ಚಿನ ಖರ್ಚು ಮಾಡಿ ಆಟ ಆಡತಕ್ಕಂಥದ್ದು, ಇದಕ್ಕೆ ವಿಶಾಲವಾದ ಜಾಗ ಬೇಕು. ಆದರೆ ಉಳಿದ ಆಟಗಳಾದ ಹಾಕಿ ಇರಬಹುದು. ಫುಟ್‌ಬಾಲ್ ಇರಬಹುದು. ಟೆನ್ನಿಸ್ ಇರಬಹುದು. ಇದಕ್ಕೆ ಸ್ವಲ್ಪ ಜಾಗ ಬೇಕಾಗುತ್ತದೆ. ಆದರೆ ಅದಕ್ಕೂ ಕೂಡ ಇವೊತ್ತು ಪಟ್ಟಣಗಳಲ್ಲಿ ಜಾಗ ಇಲ್ಲ. ಅದಕ್ಕಾಗಿ ದಯವಿಟ್ಟು ನಮ್ಮ ಟೌನ್ ಪ್ಲಾನಿಂಗ್ ಅಥಾರಿಟಿ ಪ್ರಕಾರ ಏನು ನಿಗಧಿ ಮಾಡಿದ ಜಾಗ ಇರುತ್ತದೆಯೋ ಆ ಜಾಗವನ್ನು ಆ ಆಟದ ಮೈದಾನವನ್ನು ಯಾವುದೇ ಸಂದರ್ಭದಲ್ಲಿ ಪರಭಾರೆ ಮಾಡಬಾರದು ಎಂಬ ನಿಯಮ ಕಡ್ಡಾಯವಾಗಿ ಪಾಲನೆ ಮಾಡಬೇಕು. ಅದು ಎಷ್ಟೇ ಒತ್ತಡ ಬರಲಿ, ಏನೇ ಒತ್ತಾಯ ಬರಲಿ, ಬೇರೆ ಯಾವುದಾದರೂ ನಾವು ಕನ್‌ವರ್ಟ್ ಮಾಡಬಹುದು. ಬದಲಾವಣೆ ಮಾಡಬಹುದು, ಆದರೆ ಆಟದ ಮೈದಾನಕ್ಕೆ ಇಟ್ಟು ಜಾಗವನ್ನು ಬೇರೆಯದಕ್ಕೆ ಬದಲಾವಣೆ ಮಾಡಬಾರದು ಎನ್ನತಕ್ಕಂಥದ್ದು ಬಹಳ ಮುಖ್ಯವಾದುದಾಗಿದೆ. ಸರ್ಕಾರ ಈ ಕಡೆ ಗಮನ ಕೊಡತಕ್ಕಂಥದ್ದು ಒಂದು ವಿಶೇಷ ಎಂಬುದು ನನ್ನ ಅನಿಸಿಕೆಯಾಗಿದೆ. ಇನ್ನು ಎರಡನೆಯದಾಗಿ ಈ ಬಾರಿ ತಾವು ಬಜೆಟ್ ಮಂಡನೆಯನ್ನು ಮಾಡುತ್ತೀರಿ. ಖಂಡಿತವಾಗಿ ಈ ಬಜೆಟ್‌ನಲ್ಲಾದರೂ ಕೂಡ ಆಟಕ್ಕೆ, ಆಟದ ಮೈದಾನಗಳಿಗೆ, ಸ್ಟೇಡಿಯಂ ಕಟ್ಟಿಸುವುದಕ್ಕೆ, ನೀವು ಅನೇಕ ಆಟಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡತಕ್ಕಂಥ ದೃಷ್ಟಿಯಲ್ಲಿ ಸ್ವಲ್ಪ ಹೆಚ್ಚಿನ ಹಣವನ್ನು ಇಡಬೇಕು. ದಿವಂಗತ ಶ್ರೀ ರಾಜೀವ್ ಗಾಂಧಿಯವರ ಕಾಲದಲ್ಲಿ ಏನು ಹೆಚ್ಚು ಹಣ ಇಟ್ಟಿದ್ದೆವು ಅದು ಅಲ್ಲಿಂದ ಮುಂದೆ ಕ್ರಮೇಣವಾಗಿ ಕೇಂದ್ರದಲ್ಲೂ ಕೂಡ ಕಡಿಮೆ ಆಗುತ್ತಿದೆ. ನಮಗೆ ಕೆಲವೊಂದರಲ್ಲಿ ಅಲಾಟ್ ಆದಂಥ ಹಣವನ್ನೂ ಕೂಡ ನಮ್ಮವರು ಅಲ್ಲಿಗೆ ಹೋಗಿ ತರುವುದಿಲ್ಲ. ನಮ್ಮ ಸೆಕ್ರೆಟರಿಗಳಾಗಲಿ, ಆಫೀಸರ್‌ಗಳಾಗಲಿ ಸರಿಯಾಗಿ ಪರ್ಸ್ಯೂಯೇಶನ್ ಮಾಡುವುದಿಲ್ಲ. ಅದಕ್ಕಾಗಿ ಎಷ್ಟು ಹಣ ನಮಗೆ ಕೇಂದ್ರ ಸರ್ಕಾರದಿಂದ ಬರಬೇಕೋ ಅದು ಅನೇಕ ಸಾರಿ ಬರುವುದಿಲ್ಲ. ದಯವಿಟ್ಟು ಈ ಮಾರ್ಚ್ ತಿಂಗಳಿನಲ್ಲಿ ಅಲ್ಲೂ ಕೂಡ ಅನೇಕ ಹಣ ಲ್ಯಾಪ್ಸ್ ಆಗುತ್ತದೆ. ನಮ್ಮಲ್ಲೂ ಕೂಡ ಹಣ ಲ್ಯಾಪ್ಸ್ ಆಗುತ್ತದೆ. ಅದು ಲ್ಯಾಪ್ಸ್ ಆಗದೇ ಇರುವ ರೀತಿಯಲ್ಲಿ ಅದನ್ನು ಒಂದು ಕಾರ್ಪೋರೇಶನ್‌ಗೋ, ಬೋರ್ಡ್‌ಗೋ ಟ್ರಾನ್ಸ್‌ಫರ್ ಮಾಡಿ ಖರ್ಚು ಮಾಡಿ ಆಟದ ಮೈದಾನಗಳನ್ನು, ಸ್ಟೇಡಿಯಂಗಳನ್ನು ಮಾಡಬೇಕೆಂದು ನನ್ನದೊಂದು ಮನವಿಯಾಗಿದೆ. ಇನ್ನು ಅನಿಲ್‌ಕುಂಬ್ಳೆಯವರು ಉನ್ನತವಾದ ಮಟ್ಟಕ್ಕೆ ಹೋಗಿ ವಿಶ್ವಮಟ್ಟದಲ್ಲಿ ಏಕೆಟ್ ಪಡೆದಿರುವವರಲ್ಲಿ ಏನೇ ಸ್ಥಾನವನ್ನು ಪಡೆದುಕೊಂಡಿದ್ದಾರೆ. ಅವರು ಇನ್ನೂ ಹೆಚ್ಚಿನ ಪ್ರಯತ್ನವನ್ನು ಮಾಡಲಿ ಇದಕ್ಕಾಗಿ ಅವರಿಗೆ ದೇವರು ಇನ್ನೂ ಹೆಚ್ಚಿನ ಶಕ್ತಿಯನ್ನು ಕೊಡಲಿ. ಒಂದನೆಯ ಸ್ಥಾನಕ್ಕೆ ಬರತಕ್ಕಂಥ ಪ್ರಯತ್ನ ಅವರಿಂದ ನಡೆಯಲಿ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹಾರೈಕೆಯ ರೂಪದಲ್ಲಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿ. ಸೋಮಣ್ಣ(ಬಿನ್ನಿಪೇಟೆ) : ಮಾನ್ಯ ಅಧ್ಯಕ್ಷರೇ, ತಾವೇನು ನಿರ್ಣಯವನ್ನು ತಂದಿದ್ದೀರಿ ಅದನ್ನು ಬೆಂಬಲಿಸಿ ಕರ್ನಾಟಕದವರೇ ಆಗಿರತಕ್ಕಂಥ ಅನಿಲ್ ಕುಂಬ್ಳೆಯವರ ಬಗ್ಗೆ ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ಇತ್ತೀಚಿನ ದಿನಗಳಲ್ಲಿ ವಿಶ್ವದ ಜನರ ಮನಸ್ಸನ್ನು ಗೆದ್ದಿರತಕ್ಕಂಥ ಕುಂಬ್ಳೆಯವರಿಗೆ ಅಭಿನಂದಿಸತಕ್ಕಂಥದ್ದು ಸಮಯೋಚಿತ. ಅದರ ಜೊತೆ ಜೊತೆಯಲ್ಲಿ ಇವೊತ್ತು ಅವರು ಏನೊಂದು ಮಾಂತ್ರಿಕ ಬೌಲರ್ ಆಗಿ ವಿಶ್ವದ ಜನರ ಮನಸ್ಸನ್ನು ಗೆದ್ದಿದ್ದಾರೆ. ಅದೇ ರೀತಿ ಇದ್ದಂಥ ಬಿ.ಎಸ್. ಚಂದ್ರಶೇಖರ್‌ರವರು ಇವೊತ್ತು ಅನೇಕ ಒತ್ತಡಗಳ ಮಧ್ಯದಲ್ಲಿ ತೊಂದರೆಯನ್ನು ಅನುಭವಿಸುತ್ತಾ, ಇರತಕ್ಕಂಥದ್ದು ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಅದೇ ರೀತಿ ಇಎಎಸ್ ಪ್ರಸನ್ನರವರು. ವಿಶೇಷವಾಗಿ ಚಂದ್ರಶೇಖರ್‌ರವರು, ಅಂದಿನ ಕಾಲದಲ್ಲಿ ಈ ಕ್ರೀಡೆ ಎನ್ನತಕ್ಕಂಥದ್ದು ಈ ರಾಷ್ಟ್ರದಲ್ಲಿ ಅಷ್ಟೊಂದು ಪರಿಚಯ ಇಲ್ಲದೆ ಇರತಕ್ಕಂತ ಸಂದರ್ಭದಲ್ಲಿಯೂ ಕೂಡ ಆಗ ಅವರ ಸಾಧನೆ ಇವತ್ತೇನು ಅನಿಲ್ ಕುಂಬ್ಳೆಯವರ ಸಾಧನೆ ಇದೆ ಅದೇ ಮಟ್ಟದಲ್ಲಿ ಸಾಗುತ್ತಿತ್ತು ಎನ್ನುವ ಅನುಭವ ತಮಗೆ ಇದೆ ಎಂದು ತಿಳಿದುಕೊಂಡಿದ್ದೇನೆ. ನಾನಾದರೂ ತಮ್ಮ ಮೂಲಕ ಇವೊತ್ತು ವಿನಂತಿ ಮಾಡುವುದೇನೆಂದರೆ ಕರ್ನಾಟಕದ ರಾಜಧಾನಿ ಬೆಂಗಳೂರು ನಗರದಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣ ಎಂದು ಏನಿದೆ ಅದನ್ನು ಆ ಮಟ್ಟದಲ್ಲಿ ಕಟ್ಟತಕ್ಕಂಥ ಶಕ್ತಿಯನ್ನು ಬೆಳೆಸಿಕೊಂಡಿದ್ದಂಥವರು ದಿವಂಗತರಾಗಿರತಕ್ಕಂಥ ಸಿ. ನಾಗರಾಜ್‌ರವರು. ಪ್ರಾಯಶಃ ನಾನು ಬೆಂಗಳೂರು ಮಹಾನಗರಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅಧ್ಯಕ್ಷನಾಗಿ ಕೇವಲ ಹತ್ತು ಲಕ್ಷ ರೂಪಾಯಿಗಳನ್ನು ಅಂದಿನ ಕಾಲದಲ್ಲಿ ಕೊಟ್ಟಿದ್ದಕ್ಕೆ ಅವರು ಅದನ್ನು ಎಷ್ಟೊಂದು ಸ್ಮರಣೆ ಮಾಡುತ್ತಿದ್ದರೆಂದರೆ ಅದನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಈಗಾಗಲೇ ಮಿತ್ರರಾಗಿರತಕ್ಕಂಥ ಶ್ರೀ ಡಿ.ಕೆ. ಶಿವಕುಮಾರ್‌ರವರು ಹೇಳಿದ ಹಾಗೆ ಅನಿಲ್‌ಕುಂಬ್ಳೆಯವರಿಗೆ ಹತ್ತು ಎಕರೆ ಜಾಗ ಕೊಡುವುದು ಒಂದು ಕಡೆಯಾದರೆ, ಆ ಜಾಗವನ್ನು ಯಾವ ರೀತಿಯಲ್ಲಿ ವಿನಿಯೋಗ ಮಾಡಬೇಕು. ಅದನ್ನು ಒಂದು ಕ್ರೀಡಾಂಗಣವನ್ನಾಗಿ ಮಾಡತಕ್ಕಂಥದ್ದಕ್ಕೆ ಏನೇನು ಸಾಧಕಬಾಧಕಗಳಿವೆ, ಇದರ ಬಗ್ಗೆಯೂ ಕೂಡ ನಾವು ಚರ್ಚೆಯನ್ನು ಮಾಡಬೇಕಾಗುತ್ತದೆ. ಯೋಚನೆಯನ್ನು ಮಾಡಬೇಕಾಗುತ್ತದೆ. ಸನ್ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವಂತೆ ಸರ್ಕಾರ ಅನೇಕ ಕ್ರೀಡಾಂಗಣಗಳನ್ನು ಕೊಟ್ಟಿದೆ. ಈಗಾಗಲೇ ನಮ್ಮ ಕ್ರೀಡಾ ಸಚಿವರು ತಮ್ಮ ಘೋಷಣೆಯನ್ನು ಮಾಡಿದ್ದಾರೆ. ಇಡೀ ರಾಜ್ಯದ 174 ತಾಲ್ಲೂಕುಗಳಲ್ಲೂ ಕ್ರೀಡಾಂಗಣಗಳನ್ನು ಕಟ್ಟುತ್ತೇವೆಂದು ಹೇಳಿದ್ದಾರೆ. ನೀವು ಕಟ್ಟುವುದಕ್ಕಿಂತ ಮುಂಚಿತವಾಗಿ ಎಲ್ಲೆಲ್ಲಿ ಕ್ರೀಡಾಂಗಣ ಅರ್ಧಂಬರ್ಧ ಆಗಿದೆ, ಯಾವ ಯಾವ ಮಟ್ಟದಲ್ಲಿದೆ, ಅಲ್ಲಿ ಏನು ನಡೆಯುತ್ತಿದೆ ಎನ್ನುವುದನ್ನು ತಾವು ಆ ಇಲಾಖೆಯ ಮುಖ್ಯಸ್ಥರಿಂದ ವರದಿಯನ್ನು ತರಿಸಿಕೊಂಡು ಅರ್ಧಂಬರ್ಧ ಆಗಿರತಕ್ಕಂಥ ಕ್ರೀಡಾಂಗಣವನ್ನು ಪೂರ್ಣಗೊಳಿಸುವ ಪ್ರಕ್ರಿಯೆಗೆ ಚಾಲನೆಯನ್ನು ಕೊಟ್ಟು ಇನ್ನು ಉಳಿದಿರತಕ್ಕಂಥದ್ದಕ್ಕೆ ಕ್ರೀಡಾಂಗಣ ಮಾಡತಕ್ಕಂಥದ್ದು, ಮತ್ತು 174 ತಾಲ್ಲೂಕುಗಳಲ್ಲಿ ಕ್ರೀಡಾಂಗಣ ಮಾಡುತ್ತೇನೆ, ಇದು ನನ್ನ ಕಾಲದಲ್ಲಿ ಅಥವಾ ಯಾರ ಕಾಲದಲ್ಲಿ ಎಂದು ಹೇಳುವುದಕ್ಕಿಂತ ಹೆಚ್ಚಾಗಿ ಮಾಡತಕ್ಕಂಥ ಕೆಲಸವನ್ನು ಪರಿಪೂರ್ಣವಾಗಿ ಮತ್ತು ಪರಿಪಕ್ವವಾಗಿ ಮಾಡಿದರೆ ಅದಕ್ಕೆ ಏನಾದರೂ ಒಂದು ಬೆಲೆ ಸಿಗುತ್ತದೆ. ಆ ನಿಟ್ಟಿನಲ್ಲಿ ಅನಿಲ್ ಕುಂಬ್ಳೆಯವರಿಗೆ ಏನು ತಾವು ಅಭಿನಂದನಾ ನಿರ್ಣಯವನ್ನು ತಂದಿದ್ದೀರಿ ಇದು ನಿಜವಾಗಿಯೂ ಕೂಡ ಪ್ರಶಂಸನೀಯವಾದುದು. ತನ್ಮೂಲಕ

ಮುಂದಿನ ಪೀಳಿಗೆಗೆ ಚಿನ್ನಸ್ವಾಮಿ ಕ್ರೀಡಾಂಗಣ ಹೊರತುಪಡಿಸಿದರೆ ಬೆಂಗಳೂರು ನಗರದಲ್ಲಿರತಕ್ಕಂಥ ಒಟ್ಟು ಜನಸಂಖ್ಯೆ ಏನಿದೆ ಇದರಲ್ಲಿ ಯುವಕರನ್ನು ಆದ್ಯತೆಯ ಮೇಲೆ ನೋಡಿದಾಗ ನಾನು ಕ್ರೀಡಾ ಸಚಿವರಲ್ಲಿ ಹೇಳುವುದು, ನಿಮ್ಮ ವ್ಯಾಪ್ತಿಗೆ ಬರದಿದ್ದರೂ ಕೂಡ ನಾವು ಬೆಂಗಳೂರು ನಗರದ ಇನ್ನಿತರ ಭಾಗಗಳಲ್ಲೂ ಕೂಡ ಒಂದೊಂದು ಕ್ರೀಡಾಂಗಣವನ್ನು ಮಾಡತಕ್ಕಂಥದ್ದು ಸೂಕ್ತ. ಇವೊತ್ತು ಕೇವಲ ಕ್ರಿಕೆಟ್‌ಗೋಸ್ಕರವಾಗಿಯೇ ಒಂದು ಕ್ರೀಡಾಂಗಣ ಎಂದು ಇರಬಾರದು. ಕ್ರಿಕೆಟ್ ಜೊತೆಯಲ್ಲಿ ನಾವು ಬೇರೆ ಬೇರೆ ಕ್ರೀಡೆಗೂ ಕೂಡ ನಾವು ಆದ್ಯತೆಯನ್ನು ಕೊಡಬೇಕಾಗುತ್ತದೆ. ಇವೊತ್ತು ಕಾಮನ್‌ವೆಲ್ತ್ ಕ್ರೀಡಾಕೂಟ ಕೂಡ ನಡೆಯುತ್ತಿದೆ. ಈಗಾಗಲೇ ಭಾರತ ದೇಶದವರು ನಾಲ್ಕನೆಯ ಸ್ಥಾನದಲ್ಲಿ ಹಲವಾರು ಪದಕಗಳನ್ನು ಗೆದ್ದಿದ್ದಾರೆ. ವಿಶೇಷವಾಗಿ ಇಂಥ ಒಂದು ಸಂದರ್ಭವನ್ನು ನಾವು ಬಳಸಿಕೊಂಡು ಅನಿಲ್ ಕುಂಬ್ಳೆಯವರನ್ನು ಸನ್ಮಾನ ಮಾಡುವಾಗ ಕರ್ನಾಟಕದವರೇ ಆಗಿರತಕ್ಕಂತ ರಾಹುಲ್ ದ್ರಾವಿಡ್‌ನವರಿಗೂ ಕೂಡ, ಎಲ್ಲೋ ಒಬ್ಬ ಸಮರ್ಥ ದಕ್ಷರಾದ ಒಬ್ಬ ನಾಯಕರಾಗಿ ಇವೊತ್ತು ಕೆಲಸವನ್ನು ಮಾಡುತ್ತಿರುವ ರಾಹುಲ್ ದ್ರಾವಿಡ್ ರವರನ್ನೂ, ಕೂಡ ಜೊತೆಯಲ್ಲಿ ಕರೆಸಿ ಅವರಿಗೂ ಸನ್ಮಾನ ಮಾಡುವುದು, ಅಭಿನಂದನೆಯನ್ನು ಮಾಡತಕ್ಕಂಥದ್ದು ಸೂಕ್ತವೇ, ಔಚಿತ್ಯವೇ ಎನ್ನುವುದರ ಬಗ್ಗೆ ಚಿಂತನೆಯನ್ನು ಮಾಡಿ. ಕರ್ನಾಟಕದಲ್ಲಿ ಹೆಣ್ಣುಮಕ್ಕಳಿಗೆ ಕ್ರೀಡೆಗಳಲ್ಲಿ ಅಂಥ ಒಂದು ಆದ್ಯತೆಯೇನೋ ಸಿಗುತ್ತಿಲ್ಲ. ಇವೊತ್ತು ನಮ್ಮ ರಾಷ್ಟ್ರದ ಬೇರೆ ಬೇರೆ ರಾಜ್ಯಗಳನ್ನು ನೋಡಿದಾಗ ಕರ್ನಾಟಕದಲ್ಲಿ ಹೆಣ್ಣು ಮಕ್ಕಳ ಕ್ರೀಡೆಗೆ ಅತಿ ಹೆಚ್ಚಿನ ಚಿಂತನೆಯನ್ನು ಒತ್ತನ್ನು ಕೊಡತಕ್ಕಂಥ ಪರಿಸ್ಥಿತಿಯಲ್ಲಿಲ್ಲ. ದಯಮಾಡಿ ಕ್ರೀಡಾ ಸಚಿವರು ಇದರ ಬಗ್ಗೆ ಕೂಡ ಚಿಂತನೆಯನ್ನು ಮಾಡಿ ನೀವು ನೂರೆಂಟು ಮಾಡುತ್ತೇನೆ ಎನ್ನುವುದರ ಬದಲಾಗಿ ಕೇವಲ ಒಂದೈದಾರೂ ಉಪಯುಕ್ತವಾಗಿರತಕ್ಕಂಥ ಕೆಲಸವನ್ನು ಮಾಡಿ. ಜನ ಜನಸಾಮಾನ್ಯರಿಗೆ ಅದರಲ್ಲೂ ವಿಶೇಷವಾಗಿ ಬಡಮರ ಮಕ್ಕಳೂ ಕೂಡ ಈ ಕ್ರೀಡೆಯಲ್ಲಿ ತೊಡಗಿಸಿಕೊಳ್ಳತಕ್ಕಂಥದ್ದಕ್ಕೆ ಕೆಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸರ್ಕಾರವೇ ಅದರ ಜವಾಬ್ದಾರಿಯನ್ನು ನಿರ್ವಹಣೆ ಮಾಡುವುದರ ಮುಖೇನ ಅನಿಲ್ ಕುಂಬ್ಳೆಯವರ ಸಾಧನೆಯಲ್ಲಿ ಕರ್ನಾಟಕವೂ ಕೂಡ ಕೈಜೋಡಿಸಿದೆ ಎಂದು ತೋರಿಸತಕ್ಕಂಥದ್ದಕ್ಕೆ ತನ್ನ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕೆಂದು ತಮ್ಮ ಮೂಲಕ ನಾನು ಸಚಿವರಲ್ಲಿ ಏನಂತಿ ಮಾಡುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ, ತಾವು ತಂದಿರುವ ನಿರ್ಣಯಕ್ಕೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ. ಅನಿಲ್‌ಕುಂಬ್ಳೆಯವರದ್ದು ಇದು ಎರಡನೆಯ ದಾಖಲೆಯಾಗಿದೆ. ಹಿಂದೆ ಅವರು ಏಕದಿನ ಪಂದ್ಯದಲ್ಲಿ ಹತ್ತು ವಿಕೆಟ್‌ಗಳನ್ನು ಪಡೆದಾಗ ಬೆಂಗಳೂರು ಕಾರ್ಪೊರೇಷನ್‌ನವರು ಅನಿಲ್ ಕುಂಬ್ಳೆ ವೃತ್ತ ಎಂದು ನಾಮಕರಣ ಮಾಡಿದ್ದರು. ಈಗ ಅವರು ಮಾಡಿರುವ ದಾಖಲೆ ಎರಡನೆಯದಾಗಿದೆ. ಪುನಃ ಈಗ ಅಕಾಡೆಮಿಯನ್ನು ಮಾಡುವ ಬಗ್ಗೆ ಏನು ಪ್ರಸ್ತಾವನೆಯನ್ನು ಮಾಡಿದರು ಅದನ್ನು ಸರ್ಕಾರದ ಮುಖೇನ ಮಾಡಿ ಅದಕ್ಕೆ ಅವರನ್ನು ಅಧ್ಯಕ್ಷರನ್ನಾಗಿ ಮಾಡುವ ಬಗ್ಗೆ ನೋಡಬೇಕು. ಅದರೊಟ್ಟಿಗೆ ನಾನು ಇವೊತ್ತು ಕುಂಜುರಾಣಿಯವರಿಗೂ ಕೂಡ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಅವರು ಕಾಮನ್‌ವೆಲ್ತ್ ಕ್ರೀಡೆಯಲ್ಲಿ ರಾಷ್ಟ್ರಕ್ಕೆ ಪ್ರಥಮವಾಗಿ ಗೋಲ್ಡ್ ಮೆಡಲ್‌ನ್ನು ಪಡೆದಿದ್ದಾರೆ. ಆಸ್ಟ್ರೇಲಿಯಾದ ಮೆಲ್ಬೋರ್ನ್‌ನಲ್ಲಿ ಪಡೆದಿದ್ದಾರೆ. ಇನ್ನೂ ಉಳಿದ ಕ್ರೀಡಾಪಟುಗಳಿಗೆ ಸಹ ನಾವು ಶುಭವನ್ನು ಕೋರಬೇಕಾಗುತ್ತದೆ. ಏಕೆಂದರೆ ಒಲಿಂಪಿಕ್‌ನಲ್ಲಿ ಒಂದು ಸಿಲ್ವರ್ ಮೆಡಲ್‌ನ್ನು ಪಡೆದರೆ ಬಹಳ ಸಂತೋಷವನ್ನು ಪಡುವರು. ಹೀಗಿರುವಾಗ ಕಾಮನ್‌ವೆಲ್ತ್ ಗೇಮ್‌ನಲ್ಲಿ ಪ್ರಥಮ ಗೋಲ್ಡ್ ಮೆಡಲ್‌ನ್ನು ಪಡೆದಿದ್ದಾರೆ. ಅವರಿಬ್ಬರಿಗೂ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಈಗ ಇಲ್ಲಿ ಮಾನ್ಯ ಕ್ರೀಡಾ ಸಚಿವರು ಇದ್ದಾರೆ. ಈಗ ಹೆಚ್ಚಾಗಿ ಕ್ರೀಡಾಪಟುಗಳು ಮಫಸುಜಿಯಲ್ ಏರಿಯಾಗಳಿಂದ ರಾಷ್ಟ್ರಮಟ್ಟಕ್ಕೆ ಬರುತ್ತಿದ್ದಾರೆ. ಪಟ್ಟಣ ಪ್ರದೇಶಗಳಿಗಿಂತ ಜಾಸ್ತಿ

ಮೊಘ್ಯೂನಿಲ್ ಏರಿಯಾಗಳಲ್ಲಿ ಏನು ಕ್ರೀಡಾಪಟುಗಳಿದ್ದಾರೆ. ಅಲ್ಲಿ ಸ್ಟೇಡಿಯಂನ್ನು ಮಾಡುತ್ತೇನೆಂದು ಹೇಳಿದ್ದೀರಿ. ತಮಗೆ ಅಭಿನಂದನೆಗಳು. ಆದರೆ ಅದಕ್ಕೆ ಸರಿಯಾಗಿ ನಿಮಗೆ ಅನುದಾನವನ್ನು ಬಜೆಟ್‌ನಲ್ಲಿ ಕೊಡಬೇಕಾಗುತ್ತದೆ. ಈಗಿನ ಯುವಜನ ಕ್ರೀಡಾ ಸೇವಾ ಇಲಾಖೆಗೆ ಹಿಂದೆ ಬಜೆಟ್ ಎಷ್ಟು ಇತ್ತು ಎಂಬುದನ್ನು ಹೇಳಿ. ಈಗ ಎಷ್ಟು ಕೊಡುತ್ತಾರೆ ಎಂಬುದನ್ನು ಸಹ ಹೇಳಿ. ಅದರಲ್ಲಿ ನೀವು ಇಡೀ ರಾಜ್ಯದಲ್ಲಿ ಎಲ್ಲಾ ಕಡೆ ಸ್ಟೇಡಿಯಂಗಳನ್ನು ಕಟ್ಟುತ್ತೀರಿ ಎಂದರೆ ಅದನ್ನು ನಾವು ಒಪ್ಪುವುದಕ್ಕೆ ಸಾಧ್ಯವಾಗುವುದಿಲ್ಲ. ದಯವಿಟ್ಟು ತಾವು ಮಾನ್ಯ ಹಣಕಾಸಿನ ಸಚಿವರಿಗೆ ಹೇಳಬೇಕು. ನಾವೆಲ್ಲಾ ಒತ್ತಾಯವನ್ನು ಮಾಡುತ್ತೇವೆ. ಹೆಚ್ಚು ಅನುದಾನವನ್ನು ಯುವಜನ ಸೇವಾ ಇಲಾಖೆಗೆ ಕೊಡಬೇಕಾಗುತ್ತದೆ. ಏಕೆಂದರೆ ಯುವಕರಿಗೆ ಕೇವಲ ಅಕ್ಷರಾಭ್ಯಾಸ ಮಾಡಿದ ಕೂಡಲೇ ವಿದ್ಯಾಭ್ಯಾಸ ಆಗುವುದಿಲ್ಲ. ವಿದ್ಯಾಭ್ಯಾಸ ಎಂದರೆ ಪಠ್ಯೇತರ ಚಟುವಟಿಕೆಗಳೂ ಕೂಡ ಹೌದು. ಸ್ಪೋರ್ಟ್ಸ್ ಅಂಡ್ ಕಲ್ಚರಲ್ ಆಕ್ಟಿವಿಟೀಸ್, ಅದರಲ್ಲಿ ಹೆಚ್ಚು ಒತ್ತನ್ನು ಕೊಟ್ಟು ಹೆಚ್ಚು ಉತ್ತೇಜನವನ್ನು ಕೊಡುವಂಥ ಪರಿಸ್ಥಿತಿ ನಿರ್ಮಾಣವಾದಾಗ ಮಾತ್ರ ಪರ್ಸನಾಲಿಟಿ ಡೆವಲಪ್‌ಮೆಂಟ್ ಆಗುತ್ತದೆ. ವ್ಯಕ್ತಿತ್ವದ ವಿಕಸನ ಆಗುತ್ತದೆ. ಅದಕ್ಕೋಸ್ಕರ ಹೆಚ್ಚು ಕೆಲಸವನ್ನು ಮಾಡಬೇಕೆಂದು ಹೇಳಿ ತಾವು ಈಗ ತಂದಿರುವ ನಿರ್ಣಯಕ್ಕೆ ನನ್ನ ಬೆಂಬಲವನ್ನು ವ್ಯಕ್ತಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಮಾನ್ಯ ಸದಸ್ಯರು :– ಯುವಕರಿಗೆ ತಾವು ಮಾತನಾಡುವುದಕ್ಕೆ ಅವಕಾಶ ಕೊಡಲಿಲ್ಲ. ಉಳಿದವರೆಲ್ಲಾ ಮಾತನಾಡಿದರು. ನಾವೂ ಸಹ ಕ್ರೀಡಾಪಟುಗಳಾಗಿರುವವರು. ದಯಮಾಡಿ ಎರಡೆರಡು ನಿಮಿಷ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ. ನಾವು ಹೆಚ್ಚು ಕಾಲವನ್ನು ತೆಗೆದುಕೊಳ್ಳುವುದಿಲ್ಲ.

(ಈ ಹಂತದಲ್ಲಿ ಅಭಿನಂದನಾ ನಿರ್ಣಯದ ಮೇಲೆ ಮಾತನಾಡುವುದಕ್ಕೆ ಹಲವಾರು ಸದಸ್ಯರು ಒಮ್ಮೆಗೇ ಮಾತನಾಡಲು ಅವಕಾಶ ಕೊಡುವಂತೆ ಅಧ್ಯಕ್ಷರನ್ನು ವಿನಂತಿಸುತ್ತಿದ್ದರು)

ಅಧ್ಯಕ್ಷರು :– ಇದರ ಬಗ್ಗೆಯೇ ನೀವೆಲ್ಲಾ ಮಾತನಾಡುತ್ತಾ ಹೋದರೆ ಇವೊತ್ತು ರಾಷ್ಟ್ರಪತಿಗಳ ಭಾಷಣದ ಮೇಲೆ ಮಾತನಾಡುವುದಕ್ಕೆ ಸಮಯ ಸಾಕಾಗುವುದಿಲ್ಲ. ಈ ರೀತಿ ಆದರೆ ಚೆನ್ನಾಗಿರುವುದಿಲ್ಲ. ದಯಮಾಡಿ ಬೇಗ ಮುಗಿಸೋಣ.

(ಗೊಂದಲ)

ಮಾನ್ಯ ಸದಸ್ಯರು : ಹಿರಿಯ ಸದಸ್ಯರೆಲ್ಲರಿಗೂ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದೀರಿ. ದಯಮಾಡಿ ನಮಗೂ ಅವಕಾಶ ಕೊಡಿ.

ಅಧ್ಯಕ್ಷರು : ಎಲ್ಲರೂ ಹೀಗೆ ಮಾಡಿದರೆ ಹೇಗೆ ?

(ಗೊಂದಲ)

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು) :– ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದ ಕೀರ್ತಿಯನ್ನು ಹಾಗೂ ದೇಶದ ಕೀರ್ತಿಯನ್ನು ಅಂತರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ದಂತಹ ಸನ್ಮಾನ್ಯ ಅನಿಲ್ ಕುಂಬ್ಳೆಯವರಿಗೆ ಅಭಿನಂದನೆಯನ್ನು ಸಲ್ಲಿಸತಕ್ಕಂಥ ನಿರ್ಣಯವನ್ನು ಈ ಸಭೆ ತೆಗೆದುಕೊಂಡಿರುವಂಥಾದ್ದು ಸ್ವಾಗತಾರ್ಹ ಸ್ವಾಮಿ, ನಾವು ಯುವಕರಿದ್ದೇವೆ, ನಮಗೆ ಅವಕಾಶವನ್ನು ಕೊಡಿ, ನೋಡಿ ಆ ಲೈನ್‌ನಲ್ಲಿರುವವರೆಲ್ಲರೂ ಮಾತನಾಡಿದರೆ ಹೇಗೆ ?

ಶ್ರೀ ಕೆ.ಆರ್. ರಮೇಶ್ ಕುಮಾರ್ :– ನಿಮ್ಮ ಪರವಾಗಿ ಮಾತನಾಡುವುದಕ್ಕೆ . . .

ಶ್ರೀ ಸಿ.ಟಿ. ರವಿ :– ನಮ್ಮ ಪರವಾಗಿ ನೀವು ಅಧಿಕಾರದಲ್ಲಿದ್ದಾಗ ಏನಾದರೂ ಮಾಡಿದ್ದರೆ ಪರವಾಗಿಲ್ಲ. ಆದರೆ ಆಗ ನೀವೇನೂ ಮಾಡಿಲ್ಲ. ಈಗ ನಾವೇ ಮಾತನಾಡುತ್ತೇವೆ.

ಶ್ರೀ ನೆ.ಲ. ನರೇಂದ್ರಬಾಬು :– ಸನ್ಮಾನ್ಯ ಸಭಾಧ್ಯಕ್ಷರೇ

ಶ್ರೀ ಕೆ.ಆರ್. ರಮೇಶ್ ಕುಮಾರ್ :– ಬಾಬು, ನಿಮ್ಮ ಪರವಾಗಿ ನಾನು ಮಾತನಾಡುತ್ತಿದ್ದೇನೆ.

ಅಧ್ಯಕ್ಷರು :– ಬೇಗ ಮುಗಿಸೋಣ, ಏಕೆಂದರೆ ಈಗಾಗಲೇ ಸಾಕಷ್ಟು ಜನ ಮಾತನಾಡಿದ್ದಾರೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ (ಶ್ರೀನಿವಾಸಪುರ) :– ಮಾನ್ಯ ಅಧ್ಯಕ್ಷರೆ, ಏನಾಗುತ್ತದೆ ಎಂದರೆ ಎಲ್ಲಾ ಪ್ರಮುಖ ವಿಚಾರಗಳಲ್ಲಿ ಜನರಲ್ಲಾಗಿ ಮುಂದಿನ ಸಾಲಿನವರಿಗೆ ಅವಕಾಶ ಸಿಗುತ್ತದೆ. ಬಹಳ ಜನ ಹೊಸಬರು ಯೆಂಗೆಸ್ಟರ್ಸ್ ಎಲ್ಲಾ ಇದ್ದಾರೆ. ಇದಕ್ಕೇನು ಸ್ಪೆಷಲೈಸೇಷನ್ ಏನೂ ಬೇಕಾಗಿಲ್ಲ. ನಾನೇನು ಹೇಳುತ್ತೇನೆಂದರೆ, ತಾವು ಸ್ವಲ್ಪ ದೊಡ್ಡಮನಸ್ಸು ಮಾಡಬೇಕು. ಎರಡೆರಡು ನಿಮಿಷ ಎಲ್ಲರಿಗೂ ಅವಕಾಶ ಕೊಡಿ ಏನೂ ಕಷ್ಟವಾಗುವುದಿಲ್ಲ.Unless we allow them to open their mouth. ಪಾಪ ಅವರಿಗೆ ಅವಕಾಶಗಳು ಇದರಲ್ಲಿಯಾದರೂ ಒಂದೆರಡು ನಿಮಿಷ ಕೊಟ್ಟರೆ ಜನರಲ್ಲಾಗಿ ಮಾತನಾಡುತ್ತಾರೆ. ಪ್ರಾರಂಭ ಮಾಡಲಿ, ಹತ್ತು ಹದಿನೈದು ನಿಮಿಷ ಹೆಚ್ಚಿಗೆಯಾಗುತ್ತದೆ. ಬೇರೆ ವಿಷಯಗಳಲ್ಲಿ ನಾವು ಎಷ್ಟೋ ತಾಳ್ಮೆ ಇಟ್ಟುಕೊಳ್ಳುತ್ತೇವೆ. ಎಲ್ಲರಿಗೂ ಒಂದೈದು ನಿಮಿಷ ಅವಕಾಶ ಕೊಡಿ. ಏನೂ ತೊಂದರೆಯಾಗುವುದಿಲ್ಲ. ಪ್ಲೀಸ್.

ಅಧ್ಯಕ್ಷರು :– ಈ ವಿಚಾರಕ್ಕೆ ಜಾಸ್ತಿ ಸಮಯವಾದರೆ ಬೇರೆಯದಕ್ಕೆ ಅವಕಾಶ ಕಡಿಮೆಯಾಗುತ್ತದಲ್ಲಾ ಎಂದು.

ಶ್ರೀ ಹೆಚ್. ಡಿ. ಬಸವರಾಜ್ :– ಮಾನ್ಯ ಅಧ್ಯಕ್ಷರೆ, ಬೇರೆ ವಿಚಾರದಲ್ಲಿ ಕೂಡ ಅದೇ ರೀತಿಯ ಔದಾರ್ಯತೆ ಬೇಕು ಸಾರ್ ನಮಗೆ, ಇದೊಂದೇ ವಿಚಾರದಲ್ಲಿ ಅಲ್ಲ.

(ಗೊಂದಲ)

ಅಧ್ಯಕ್ಷರು :– ಆಯಿತು ಮಾತನಾಡಿ, ಎಲ್ಲರೂ ಒಂದೇ ಬಾರಿಗೆ ನಿಂತರೆ. ಯಾರಿಗೆ ಎಂದು ಅವಕಾಶ ಕೊಡುವುದು ?

ಶ್ರೀ ಸಿ.ಟಿ. ರವಿ :– ಬಹಳ ಉತ್ತಮವಾದಂತಹ ನಿರ್ಣಯವನ್ನು ತೆಗೆದುಕೊಂಡಿದ್ದೀರಿ. ರಾಷ್ಟ್ರಮಟ್ಟದಲ್ಲಿ ಮತ್ತು ರಾಜ್ಯಮಟ್ಟದಲ್ಲಿ . . .

ಅಧ್ಯಕ್ಷರು :– ಮಾತನಾಡಿ ಬಾಬು ಒಬ್ಬೊಬ್ಬರೇ ಮಾತನಾಡಿ.

ಶ್ರೀ ಸಿ.ಟಿ. ರವಿ :– ಮಾನ್ಯ ಅಧ್ಯಕ್ಷರಿಗೆ ಈ ಕಡೆ ದೃಷ್ಟಿ ಇಲ್ಲದ ಹಾಗೆ ಆಯಿತಲ್ಲಾವೆಂದು ನನಗೆ ವ್ಯಥೆಯಾಗುತ್ತಿದೆ.

ಅಧ್ಯಕ್ಷರು :– ಇಲ್ಲ, ನಿಮಗೂ ಅವಕಾಶ ಕೊಡುತ್ತೇನೆ, ಇವರದ್ದು ಆದಮೇಲೆ ನೀವು ಮಾತನಾಡಿ.

ಶ್ರೀ ಬಸವರಾಜ್ ರಾಯರೆಡ್ಡಿ :– ಮಾನ್ಯ ಅಧ್ಯಕ್ಷರೆ, ಹೌಸ್ ಬಿಸಿನೆಸ್ ಪ್ರಾರಂಭ ಮಾಡಿ.

ಅಧ್ಯಕ್ಷರು :– ಆಯಿತಪ್ಪ, ಜೂನಿಯರ್ಸ್ ಮಾತನಾಡಲಿ. ಏನು ಮಾಡುವುದು ? ದಯಮಾಡಿ ಎರಡೆರಡು ನಿಮಿಷ ಮಾತನಾಡಿ. ಈ ತರಹ ಆದರೆ ಆಗುವುದಿಲ್ಲ.

ಶ್ರೀ ನೆ.ಲ. ನರೇಂದ್ರ ಬಾಬು (ರಾಜಾಜಿನಗರ) :– ಮಾನ್ಯ ಅಧ್ಯಕ್ಷರೆ, ಇವತ್ತು ಅನಿಲ್ ಕುಂಬ್ಳೆಯವರ ಸಾಧನೆಯನ್ನು ಶ್ಲಾಘಿಸಿ ಮಂಡಿಸಿರತಕ್ಕಂಥ ನಿರ್ಣಯಕ್ಕೆ ನನ್ನ ಅಭಿನಂದನೆಯನ್ನು ತಿಳಿಸುತ್ತಾ ಅದಕ್ಕೆ ಸಹಮತವನ್ನು ವ್ಯಕ್ತಪಡಿಸುತ್ತಾ, ಇವತ್ತು ಕರ್ನಾಟಕವು ಕ್ರಿಕೆಟ್ ಇತಿಹಾಸದಲ್ಲಿ ಹಲವಾರು ಮೈಲಿಗಲ್ಲನ್ನು ದಾಖಲಿಸಿರತಕ್ಕಂಥಾದ್ದು ನಮ್ಮೆಲ್ಲರ ನೆನಪಿನ ಪುಟದಲ್ಲಿ ಇನ್ನೂ ಹಸಿರಾಗೇ ಉಳಿದಿದೆ. ಬಹುಶ: ಜೆ.ಆರ್. ವಿಶ್ವನಾಥ್‌ರವರಾಗಲಿ, ಪ್ರಸನ್ನರವರಾಗಲಿ, ಚಂದ್ರಶೇಖರ್‌ರವರಾಗಲಿ ಕೀರ್ಮಾನಿಯವರಾಗಲಿ, ಬ್ರಿಜೇಶ್ ಪಟೇಲ್‌ರವರಾಗಲಿ ಎಲ್ಲರೂ ಒಂದು ಕ್ರಿಕೆಟ್ ತಂಡದಲ್ಲಿ ಬಹಳ ಜನ ಇದ್ದವರನ್ನು ನಾವು ಮರೆಯುವ ಹಾಗಿಲ್ಲ. ಇಂತಹ ಸಂದರ್ಭದಲ್ಲಿ ಅನಿಲ್ ಕುಂಬ್ಳೆಯವರ ದಾಖಲೆ ಬಹುಶ: ಈ ರಾಷ್ಟ್ರದಲ್ಲಿರತಕ್ಕಂಥ ಸುಮಾರು ಜನಸಂಖ್ಯೆಯಲ್ಲಿ ಶೇಕಡ 60 ಭಾಗ, 40 ವರ್ಷಗಳ ಕೆಳಗಡೆ ಇರುವಂತಹ ಯುವಶಕ್ತಿ ಇದೆ. ಇನ್ನು 18 ರಿಂದ 25 ವರ್ಷದ ಕೆಳಗಡೆ ಇರತಕ್ಕಂಥವರು ಸುಮಾರು 57 ಪರ್ಸೆಂಟ್ ಇದ್ದಾರೆ. ಅಂದರೆ ಭಾರತದ ಭವಿಷ್ಯ ಯುವಶಕ್ತಿಯ ಕೈಯಲ್ಲಿದೆ ಎನ್ನುವುದನ್ನು, ನಿನ್ನೆ ರಾಜಶೇಖರ್ ಅವರು ಹೇಳುತ್ತಿದ್ದರು. ಈ ಸಂದರ್ಭದಲ್ಲಿ ನಾನು ಹೇಳುವುದು ಇಷ್ಟೆ, ಇವತ್ತು ಜಗತ್ತನ್ನು ಅಥವಾ ರಾಷ್ಟ್ರವನ್ನು ಒಂದು ಮಾಡುವಂತಹ ಅದ್ಭುತವಾದಂತಹ ಏನಾದರೂ ಶಕ್ತಿ ಇದೆ ಎಂದರೆ, ಅದು ಒಂದು ಕಲೆಯಲ್ಲಿ,, ಮತ್ತೊಂದು ಕ್ರೀಡೆಯಲ್ಲಿ. ಈ ಸಂದರ್ಭದಲ್ಲಿ ನಮ್ಮ ಯುವಜನ ಕ್ರೀಡಾ ಸಚಿವರು ಒಂದು ಮಾತು ಹೇಳಿದ್ದಾರೆ, ಎಲ್ಲಾ ಕ್ಷೇತ್ರ ಹಾಗೂ ತಾಲ್ಲೂಕುಗಳಲ್ಲಿ ಕ್ರೀಡಾಂಗಣವನ್ನು ಕಟ್ಟುತ್ತೇವೆಂದು ಹೇಳಿದ್ದಾರೆ. ಕ್ರೀಡೆ ಮತ್ತು ಕಲೆ ಎರಡನ್ನೂ ಸೇರಿಸತಕ್ಕಂಥ ಯುವ ಕೇಂದ್ರಗಳನ್ನು ಆರಂಭ ಮಾಡಿದೇ ಆದಲ್ಲಿ ಬಹುಶ: ಹಲವಾರು ಸಾಮಾಜಿಕ ಪಿಡುಗುಗಳು ಅಥವಾ ಯುವಶಕ್ತಿಗಳು ದಿಕ್ಕುತಪ್ಪಿ ಉಗ್ರಗಾಮಿಗಳು ಆಗತಕ್ಕಂಥಾದ್ದು, ನಕ್ಸಲೈಟ್‌ಗಳು ಆಗತಕ್ಕಂಥಾದ್ದು ಅಥವಾ ಸಮಾಜಕ್ಕೆ ಹೊರೆಯಾಗತಕ್ಕಂಥಾದ್ದು ತಪ್ಪಿಸಿದ ಹಾಗೆ ಆಗುತ್ತದೆ. ಮತ್ತೆ ನಾನು ಈ ಒಂದು ಸಂದರ್ಭದಲ್ಲಿ ಮನವಿ ಮಾಡುವುದೇನೆಂದರೆ, ಆಗಲೇ ಮಾನ್ಯ ಹೆಗಡೆಯವರು ಒಂದು ಮಾತನ್ನು ಹೇಳಿದರು. ಗ್ರಾಮೀಣ ಪ್ರದೇಶದಿಂದ ಇವತ್ತು ಹೆಚ್ಚು ಕ್ರೀಡಾಪಟುಗಳನ್ನು ಕಾಣುತ್ತಿದ್ದೇವೆ ಎಂದು ಹೇಳಿದರು. ಅದು ಅಕ್ಷರಶ: ಸತ್ಯ. ಇವತ್ತು ಗ್ರಾಮೀಣ ಪ್ರದೇಶದಿಂದ ಏಕೆ ಬರುತ್ತಾರೆ ಎಂದರೆ ನಾನು 8ನೇ ತರಗತಿಯಲ್ಲಿ ಕೊಳ್ಳೇಗಾಲದಲ್ಲಿ ಓದುತ್ತಿದ್ದಾಗ ನಮಗೆ ಅಲ್ಲಿ ಸರ್ಕಾರಿ ಶಾಲೆಗೆ ಇದ್ದಂತಹ ಆಟದ ಮೈದಾನ ನೋಡಿದರೆ ಬಹುಶ: ಬೆಂಗಳೂರಿನಲ್ಲಿ ಅಷ್ಟು ದೊಡ್ಡ ಆಟದ ಮೈದಾನ ಎಲ್ಲೂ ಇಲ್ಲ. ಇವತ್ತು ಬೆಂಗಳೂರು ನಗರದಲ್ಲಿ ಶಾಲೆಗಳಿಗೆ ಒಂದು ಆಟದ ಮೈದಾನ ಇಲ್ಲ, ಟ್ರೈಮಿಸ್ಟರ್ ಬಂದಮೇಲೆ ಬಹಳಷ್ಟು ಕಡೆ ಆಟಗಳು ಇಲ್ಲ. ಇಂತಹ ಸಂದರ್ಭದಲ್ಲಿ ಇರತಕ್ಕಂಥ ಕ್ರೀಡಾಂಗಣಗಳನ್ನು ಕೇವಲ ಕ್ರಿಕೆಟ್‌ಗೆ ಮೀಸಲಿಡದೆ, ಅಥ್ಲೆಟಿಕ್ ಇವೆಂಟ್ಸ್, ಹೈಜಂಪ್, ಲಾಂಗ್‌ಜಂಪ್, ಮತ್ತು ಬೇರೆ ಬೇರೆ ಕ್ರೀಡೆಗಳಿಗೂ ಒತ್ತು ಕೊಡುವುದರ ಮುಖೇನ ಬಹುಶ: ಮುಂದಿನ ದಿನಗಳಲ್ಲಿ ನಮ್ಮ ಯುವಕರನ್ನು ಸಜ್ಜು ಮಾಡಿದ ಹಾಗೆ ಆಗುತ್ತದೆ. ಆ ದಿಕ್ಕಿನಲ್ಲಿ ಬಹಳಷ್ಟು ಕೆಲಸ ಮಾಡಬೇಕಾಗುತ್ತದೆ. ನಿಶಾ ಮೆಲಿಟ್‌ರವರು ಮೊನ್ನೆ ಪತ್ರಿಕೆಯಲ್ಲಿ ಹೇಳಿದಂತಹ ಮಾತನ್ನು ಕೇಳಿದಾಗ, ಅವರು ಒಂದು ಮಾತು ಹೇಳಿದರು. ಸ್ವಿಮಿಂಗ್ ಅನ್ನು ನೆಗ್ಲೆಕ್ಟ್ ಮಾಡಲಾಗಿದೆ.

ಎಂದು ಹೇಳಿದರು. ಮಾನ್ಯ ಅಧ್ಯಕ್ಷರೆ, ಈ ಸದನವನ್ನು ಉಪಯೋಗಿಸಿಕೊಂಡು ಹೇಳುತ್ತೇನೆ, ಸ್ವಿಮಿಂಗ್ ಅನ್ನು ನೆಗ್ಲೆಕ್ಟ್ ಮಾಡಿದೆ ಎಂದು ವಿಶ್ವದಾಖಲೆ ಮಾಡಿರುವಂತಹ ನಿಶಾ ಮೆಲೆಟ್ ಎಂಬ ಒಬ್ಬ ನೊಂದ ಕ್ರೀಡಾಪಟು ಹೇಳಿದರು. ದಯವಿಟ್ಟು ಇವರನ್ನೆಲ್ಲಾ ಹಿನ್ನೆಲೆ ಇಟ್ಟುಕೊಂಡು ಒಂದು ರಾಷ್ಟ್ರೀಯ ಯುವನೀತಿ ಹೇಗೆ ಆಗಿದೆಯೋ ಅದೇ ರೀತಿ ರಾಜ್ಯದ ಯುವನೀತಿ ಆಗಬೇಕು ಅನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಈ ಕ್ರೀಡಾಪಟುಗಳಿಗೆ ನೌಕರಿಯಲ್ಲಿ ಹೆಚ್ಚು ಆದ್ಯತೆ ಕೊಡಬೇಕು, ಬಹಳಷ್ಟು ಕಡೆ ಕೊಡುತ್ತಿಲ್ಲ. ಕ್ರಿಕೆಟ್‌ಗೆ ಮಾತ್ರ ಒತ್ತು ಕೊಡುವುದನ್ನು ನಾವು ನಿಲ್ಲಿಸಿ ಬೇರೆ ಕ್ರೀಡೆಗಳಿಗೂ ಕೂಡ ಆದ್ಯತೆ ಕೊಡುವುದನ್ನು ಮಾಡಬೇಕೆಂದು ಆಗ್ರಹಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು):- ಮಾನ್ಯ ಅಧ್ಯಕ್ಷರೆ, ಅನಿಲ್ ಕುಂಬ್ಳೆಯವರಿಗೆ ಅಭಿನಂದಿಸತಕ್ಕಂಥ ಒಂದು ತೀರ್ಮಾನವನ್ನು ಈ ಸದನ ಕೈಗೊಂಡಿರತಕ್ಕಂಥಾದ್ದು ಅಭಿನಂದನಾರ್ಹ. ಅವರು ಕರ್ನಾಟಕ ಮತ್ತು ದೇಶದ ಕೀರ್ತಿಗೆ ಕಾರಣರಾದವರು. ನಾನು ಈ ಸಂದರ್ಭವನ್ನು ಉಪಯೋಗಿಸಿಕೊಂಡು ಹೇಳುವುದೇನೆಂದರೆ, ಇವತ್ತು ನಾವು ಯಾವ್ಯಾವ ಶಾಲೆಗಳಿಗೆ ಅನುಮತಿಯನ್ನು ಕೊಡುತ್ತೇವೆ, ಅವುಗಳಿಗೆ ಕನಿಷ್ಟ ಆಟದ ಮೈದಾನ ಅಲ್ಲ, ಹೊರಗಡೆ ಅವರಿಗೆ ಅಡ್ಡಾಡುವುದಕ್ಕೆ ಕೂಡ ಅವಕಾಶ ಇಲ್ಲದೆ ಇರುವಂತಹ ಸ್ಥಿತಿಯೊಳಗೆ ನಾವು ಇವತ್ತು ಶಾಲೆಗಳಿಗೆ ಅನುಮತಿಯನ್ನು ಕೊಡುತ್ತಿದ್ದೇವೆ. ಆದುದರಿಂದ ಶಾಲೆಗಳಿಗೆ ಅನುಮತಿಯನ್ನು ಕೊಡುವಂತಹ ಸಂದರ್ಭದಲ್ಲಿ ಆಟದ ಮೈದಾನ ಕಡ್ಡಾಯವಾಗಿ ಇರಬೇಕು ಎನ್ನುವಂತಹ ನಿಯಮವನ್ನು ಪಾಲಿಸಬೇಕಾಗುತ್ತದೆ. ಇವತ್ತು ಕ್ರೀಡೆ ಎಂದರೆ ಕ್ರಿಕೆಟ್ ಮತ್ತು ಟೆನಿಸ್ ಮಾತ್ರ ಎಂದಿದೆ. ಅವರು ಒಂದು ಸಲ ಅದರಲ್ಲಿ ಗೈನ್ ಮಾಡಿದರೆ ಸಾಕು, ಅವರು ತಲೆ ತಲಾಂತರಕ್ಕೆ ಬೇಕಾಗುವಷ್ಟು ದುಡಿದು ಬಿಡುತ್ತಾರೆ. ಆದರೆ ಇನ್ನು ಬೇರೆ ಕ್ರೀಡೆಗಳಲ್ಲಿ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದರೂ ಕೂಡ ಅವರ ಹೆಸರು ಪತ್ರಿಕೆಯಲ್ಲಿ ಸಿಂಗಲ್ ಲೈನಲ್ಲೂ ಕೂಡ ಬರುವುದಿಲ್ಲ. ಇಂತಹ ಸ್ಥಿತಿ ಬಂದು ಬಿಡುತ್ತದೆ. ದಾವಣಗೆರೆಯಲ್ಲಿ ಶಶಿ ಎನ್ನುವಂತಹ ಒಬ್ಬ ಹೆಣ್ಣುಮಗಳು ಕಬಡ್ಡಿಯಲ್ಲಿ ರಾಷ್ಟ್ರಮಟ್ಟದಲ್ಲಿ ಪ್ರತಿನಿಧಿಸತಕ್ಕಂಥವಳು ನಮ್ಮ ಕರ್ನಾಟಕದವಳಾಗಿದ್ದಾಳೆ. ಆಕೆ ಒಂದು ಆಶ್ರಯ ಮನೆ ಕೊಡಿ ಎಂದು ಒಂದು ಅರ್ಜಿಯನ್ನು ಹಾಕಿ ಕೊಂಡಿದ್ದಳು. ಅವಳಿಗೆ ಪೌಷ್ಟಿಕಾಂಶದ ಕೊರತೆ ಇದೆ, ಆಹಾರದ ಕೊರತೆ ಇದೆ ಎಂದು ಡಾಕ್ಟರ್ ಸರ್ಟಿಫೈ ಮಾಡಿದ್ದರು. ಇಂತಹ ಸ್ಥಿತಿಯಲ್ಲಿ ಬೇರೆ ಕ್ರೀಡಾಪಟುಗಳೂ ಇದ್ದಾರೆ ಆದಾಗ್ಯೂ ಮಾನ್ಯ ಕುಂಬ್ಳೆಯವರಿಗೆ ಅಭಿನಂದಿಸೋಣ. ಹಾಗೆ ಉಳಿದ ಕ್ರೀಡೆಗಳಿಗೂ ಕೂಡ ನಾವು ಆದ್ಯತೆಯನ್ನು ಕೊಡುವ ನಿಟ್ಟಿನಲ್ಲಿ ಯೋಚನೆ ಮಾಡಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ನಿಜ ಹೇಳಬೇಕೆಂದರೆ ಕಳೆದ ಮೂರ್ನಾಲ್ಕು ದಶಕದಿಂದ ಯುವಜನ ಮತ್ತು ಕ್ರೀಡಾ ಇಲಾಖೆ ಅಂದರೆ ಅದು ನಿರ್ಲಕ್ಷಕ್ಕೆ ಒಳಗಾದ ಇಲಾಖೆ. ಬಹುಶ: ಯಾರೂ ಕೂಡ ಈ ಇಲಾಖೆಗಾಗಿ ಪೈಪೋಟಿಮಾಡುವುದಿಲ್ಲ. ಕೊನೆಗೆ ಏನಾದರೂ ಸಿಗಬೇಕು ಎಂದು ಅದನ್ನು ಕೊಡುವುದನ್ನು ಬಿಟ್ಟರೆ, ಪೈಪೋಟಿ ಮಾಡದೆ ಇರುವಂತಹ ನಿರ್ಲಕ್ಷಕ್ಕೆ ಒಳಗಾದಂತಹ ಇಲಾಖೆಯಾಗಿದೆ. ಅದಕ್ಕೆ ಕೊಡುವಂತಹ ಅನುದಾನವೂ ಕೂಡ ಕಡಿಮೆ ಇದೆ. ಅಲ್ಲಿ ಸಂಬಳ ಅಥವಾ ಟಿಎ:ಡಿಎ ಗೂ ಕೂಡ ಅವರು ಇನ್ನೊಂದು ಇಲಾಖೆಗೆ ಅಥವಾ ಹಣಕಾಸು ಇಲಾಖೆಗೆ

ಬರೆದುಕೊಡಬೇಕಾದಂತಹ ದುಸ್ಥಿತಿಯಲ್ಲಿ ಈ ಇಲಾಖೆ ಇದೆ. ನಿಜವಾಗಲೂ ಕೂಡ ಯುವಕರು ಹಾಗೂ ಕ್ರೀಡಾಪಟುಗಳ ಬಗ್ಗೆ ಕಾಳಜಿ ಇದ್ದಿದ್ದೇ ಆದರೆ ಬಹುಶ: ಇಲಾಖೆ ಈ ಸ್ಥಿತಿಗೆ ಬರುತ್ತಿರಲಿಲ್ಲ. ಈ ಕಡೆ ಸ್ನೇಹಿತರಿಗೂ ಕೂಡ ಬಹುಶ: ಅರ್ಹತೆ ಇಲ್ಲ. ಏಕೆಂದರೆ ಈ ರಾಜ್ಯವನ್ನು ಆಳಿದ ಬಹಳಷ್ಟು ಜನ ಅವರೇ ಇದ್ದರು. ಕಳೆದ ಸಲ ಕ್ರೀಡಾ ಮತ್ತು ಯುವಜನ ಖಾತೆಯ ಸಚಿವರು ಮಾಡಿದಂತಹ ಮಹತ್ವವನ್ನು ಗಮನಿಸಿದಾಗ ಅವರು ಈ ಇಲಾಖೆಗೆ ಮಹತ್ವವನ್ನು ಕೊಟ್ಟಿದ್ದರು ಎಂಬುದು ಗೊತ್ತಾಗುತ್ತದೆ. ಕನಿಷ್ಟ ಈಗಲಾದರೂ ಕೂಡ ಯುವಕರಂತಹವರನ್ನು ಆದರೂ ಕ್ರೀಡಾ ಮತ್ತು ಯುವಜನ ಇಲಾಖೆಯ ಸಚಿವರನ್ನಾಗಿ ಸನ್ಮಾನ್ಯ ಕುಮಾರಸ್ವಾಮಿಯವರು ಮಾಡಿದ್ದಾರೆ. ಅದಕ್ಕೆ ಸರಿಯಾದ ಅನುದಾನವನ್ನು ಕೊಟ್ಟು ಎಲ್ಲಾ ಶಾಲೆಗಳಲ್ಲಿ ಆಟದ ಮೈದಾನ ಇರುವಂತೆ ಮತ್ತು ಎಲ್ಲಾ ಕ್ರೀಡೆಗಳಿಗೆ ಆದ್ಯತೆಯನ್ನು ಕೊಡಬೇಕು ಎನ್ನುವಂತಹ ಮಾತನ್ನು ಹೇಳುತ್ತಾ, ಮತ್ತೊಮ್ಮೆ ಅನಿಲ್ ಕುಂಬ್ಳೆಯವರಿಗೆ ಅಭಿನಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

(ಗೊಂದಲ)

ಅಧ್ಯಕ್ಷರು : ಈಗ ಇಷ್ಟೊಂದು ಜನ ಹೀಗೆ ನಿಂತರೆ ಹೇಗೆ ? ಈಗ ಅನ್ನದಾನಿಯವರು ಮಾತನಾಡಿ.

ಡಾ : ಕೆ. ಅನ್ನದಾನಿ (ಮಳವಳ್ಳಿ) :– ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳುತ್ತಾ, ಈ ದಿನ ನಮ್ಮ ಮತ್ತು ಬೇರೆ ಬೇರೆ ದೇಶಗಳಿಂದ ಪ್ರಶಂಸೆಗೆ ಒಳಗಾಗಿರತಕ್ಕಂಥ ಮಾನ್ಯ ಅನಿಲ್ ಕುಂಬ್ಳೆಯವರನ್ನು ನಾವೆಲ್ಲರೂ ಕೂಡ ಈ ಸದನದ ವತಿಯಿಂದ ತುಂಬು ಹೃದಯದಿಂದ ಅಭಿನಂದಿಸುತ್ತಿದ್ದೇವೆ. ಇದು ಬಹಳ ಸಂತೋಷ ತರತಕ್ಕಂಥ ವಿಚಾರ. ಇವರು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಕ್ರಿಕೆಟ್ ಆಟದಲ್ಲಿ ಒಳ್ಳೆಯ ಸಾಧನೆಯನ್ನು ಮಾಡಿದ್ದಾರೆ. ಇವರು ನಮ್ಮ ದೇಶಕ್ಕೆ ಮತ್ತು ಕನ್ನಡ ತಾಯಿಗೆ ಒಳ್ಳೆಯ ಗೌರವವನ್ನು ತಂದು ಕೊಟ್ಟಿದ್ದಾರೆ. ಅದಕ್ಕಾಗಿ ನಾನೂ ಕೂಡ ಈ ಸದನದ ಮುಖಾಂತರ ಅಂತರಾಷ್ಟ್ರೀಯ ಕ್ರೀಡಾಪಟುವಾದಂತಹ ಅನಿಲ್ ಕುಂಬ್ಳೆಯವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಈ ಕ್ರೀಡೆಗೆ ಸಿಗತಕ್ಕಂಥ ಪ್ರೋತ್ಸಾಹ ಹಾಗೂ ಅನುದಾನ ಇರಬಹುದು, ಒಳ್ಳೆಯ ರೀತಿಯ ಗೌರವ ಇರಬಹುದು ಪ್ರೋತ್ಸಾಹ ಇರಬಹುದು. ಬೇರೆ ಕ್ರೀಡೆಗಳಿಗೆ ಇವತ್ತು ಸಿಗುತ್ತಾ ಇಲ್ಲ.

ಬಹುಶ: ಕಬಡ್ಡಿ ಎನ್ನುವಂಥಾದ್ದು ಒಂದು ಕ್ರೀಡೆಯಾಗಿದೆ. ಇದು ಗ್ರಾಮೀಣ ಪ್ರದೇಶದಿಂದ ಹುಟ್ಟಿಕೊಂಡಿರುವಂಥಾದ್ದು. ಈ ಕಬಡ್ಡಿ, ಕೊಕ್ಕೋ, ವಾಲಿಬಾಲ್, ಫುಟ್‌ಬಾಲ್, ಹೀಗೆ ಎಲ್ಲಾ ಕ್ರೀಡೆಗಳು ಕೂಡ. . .

Sri Basavaraja Rayareddi :- I am on my Point or Order.

ಅನಿಲ್ ಕುಂಬ್ಳೆಯವರಿಗೆ ಸಂಬಂಧಪಟ್ಟಹಾಗೆ ಅಭಿನಂದನೆಯ ಬಗ್ಗೆ ಮಾತನಾಡಲಿ, ಅದು ಬಿಟ್ಟು ಕಬಡ್ಡಿ, ಕೊಕ್ಕೋ, ಸ್ಟೇಡಿಯಂ, ಇದೆಲ್ಲಾ ಏಕೆ ? Why you are wasting time ?

ಅಧ್ಯಕ್ಷರು : ಈಗ ನಾನು ರಿಸ್ಟ್ರಿಕ್ಟ್ ಮಾಡುವುದಕ್ಕೆ ಆಗುತ್ತದೆಯೇ ? ಇದೇ ಪದಗಳನ್ನು ಉಪಯೋಗಿಸಬೇಕೆಂದು ಹೇಳುವುದಕ್ಕೆ ಆಗುತ್ತದೆಯೇ ? ಮಾನ್ಯ ಅನ್ನದಾನಿಯವರೆ, ವಿಷಯಕ್ಕೆ ಸಂಬಂಧಪಟ್ಟ ಹಾಗೆ ಮಾತನಾಡಿ.

(ಗೊಂದಲ)

ಡಾ : ಕೆ. ಅನ್ನದಾನಿ : ಬೇರೆ ಕ್ರೀಡೆಗಳ ಬಗ್ಗೆಯೂ ಮಾತನಾಡಬೇಕಾಗುತ್ತದೆ. ಬರೀ ಕ್ರಿಕೆಟ್ ಬಗ್ಗೆಯೇ ಮಾತನಾಡತಕ್ಕಂಥಾದ್ದು ಅಲ್ಲ.

(ಗೊಂದಲ)

ಅಧ್ಯಕ್ಷರು : ಆಯಿತು ಕುಳಿತುಕೊಳ್ಳಿ, ಹೊಸಬರು, ಏನು ಮಾಡುವುದು ? ಮಾನ್ಯ ಅನ್ನದಾನಿಯವರೇ, ಮಾತನಾಡಿ.

ಡಾ : ಕೆ. ಅನ್ನದಾನಿ : ಇಲ್ಲಿ ಬೇರೆ ಕ್ರೀಡೆಗಳ ಬಗ್ಗೆ ಮಾತನಾಡಬಾರದೆಂದು ಭಾವಿಸಿಕೊಳ್ಳುವುದಾದರೆ, ಏನು ಮಾತನಾಡಬೇಕು ? ಅಂದರೆ ನೀವು ಮಾತನಾಡುವಂಥಾದ್ದೆಲ್ಲಾ ಸರಿಯಾಗಿದೆ. ನಾವು ಮಾತನಾಡುವಂಥಾದ್ದು ಸರಿಯಿಲ್ಲ ಅಂದರೆ, ಈಗ ನಾನು ಇಲ್ಲಿ ಕ್ರೀಡೆಯ ಬಗ್ಗೆ ಮಾತನಾಡುತ್ತಿದ್ದೆನೆಯೇ, ಅಥವಾ ಬೇರೆ ವಿಷಯದ ಬಗ್ಗೆ ಮಾತನಾಡುತ್ತಿದ್ದೇನೆಯೇ, ಎಂಬ ಬಗ್ಗೆ ಮಾನ್ಯ ಸಭಾಧ್ಯಕ್ಷರೇ, ತಾವು ಹೇಳಬೇಕು. ನಾನು ಇಲ್ಲಿ ಕ್ರೀಡೆಯ ಬಗ್ಗೆ ಬಿಟ್ಟು ಬೇರೆ ಏನಾದರೂ ಬೇರೆ ವಿಷಯವನ್ನು ಮಾತನಾಡುತ್ತಿದ್ದೇನೆಯೇ ?

ಅಧ್ಯಕ್ಷರು : ಅವರು ಏನೋ ಹೇಳಿದರೆಂದು ಅಷ್ಟಕ್ಕೇ ಏಕೆ ಬೇಜಾರು ಮಾಡಿಕೊಳ್ಳುತ್ತೀರಿ? ಮಾತನಾಡಿ.

ಡಾ : ಕೆ. ಅನ್ನದಾನಿ : ದಯಮಾಡಿ, ನಾನು ಮಾತನಾಡುವಂತಹ ಸಂದರ್ಭದಲ್ಲಿ, ನಾವು ವಿಚಾರಗಳನ್ನು ಬಿಟ್ಟು ಬೇರೆ ವಿಚಾರಗಳಿಗೆ ಹೋದಂತಹ ಸಂದರ್ಭದಲ್ಲಿ, ನಮ್ಮ ಹಿರಿಯ ಸದಸ್ಯರುಗಳು ನಮಗೆ ಬೇರೆ ರೀತಿಯಲ್ಲಿ ಗೈಡ್ ಮಾಡಬೇಕು. ನಾವು ಸಂತೋಷಪಡುತ್ತೇವೆ. ಇವತ್ತು ಬೇರೆ ಕ್ರೀಡೆಗಳಿಗೆ ಅಷ್ಟೊಂದು ಪ್ರೋತ್ಸಾಹ ಸಿಗುತ್ತಿಲ್ಲ ಎಂಬುದನ್ನು ನೋವಿನಿಂದ ನಾನು ಹೇಳುತ್ತಿದ್ದೇನೆ. ಇವತ್ತು ರಮೇಶ್‌ರವರು ಒಳ್ಳೆಯ ಇಂಟರ್‌ನ್ಯಾಷನಲ್ ಕಬಡ್ಡಿ ಪ್ಲೇಯರ್, ಅವರು ಒಂದು ನಿವೇಶನವನ್ನು ತೆಗೆದುಕೊಳ್ಳುವುದಕ್ಕೆ ಎಷ್ಟು ಕಷ್ಟವನ್ನು ಪಡುತ್ತಿದ್ದಾರೆಂಬುದನ್ನು ನೋಡಿದ್ದೇವೆ. ಈ ವಿಚಾರವಾಗಿ ಹೇಳುವುದಾದರೆ, ನಾವು ಎಲ್ಲಾ ಕ್ರೀಡೆಗಳ ಬಗ್ಗೆಯೂ ಆಸಕ್ತಿಯನ್ನು ವಹಿಸಬೇಕಾಗುತ್ತದೆ. ಅದಕ್ಕೆ ಪ್ರೋತ್ಸಾಹವನ್ನು ಕೊಡಬೇಕಾಗುತ್ತದೆ. ಇವತ್ತು ಮಾನ್ಯ ಸಿ.ಟಿ. ರವಿಯವರು ಹೇಳಿದರು. ಇವತ್ತು ಒಂದೇ ಒಂದು ಕ್ರೀಡೆಯ ಬಗ್ಗೆ ಪ್ರೋತ್ಸಾಹವನ್ನು ಕೊಡುವುದಿಲ್ಲ, ಬರೆಯುವುದಿಲ್ಲವೆಂಬ ಮಾತನ್ನು ಹೇಳಿದರು. ಇದು ವಾಸ್ತವಾಂಶ, ಸತ್ಯಕ್ಕೆ ಹತ್ತಿರವಾದಂತಹ ವಿಚಾರವಾಗಿದೆ. ಇಂತಹ ವಿಚಾರಗಳನ್ನು ಹೇಳಬೇಕಾದರೆ ಇವತ್ತು ನಾವೆಲ್ಲರೂ ಕೂಡ, ಹೆಚ್ಚಿನ ಸದಸ್ಯರು ಹಳ್ಳಿಗಳಿಂದ ಬಂದಿರುವಂಥವರು. ಹಳ್ಳಿಯ ಮಕ್ಕಳ ಬಗ್ಗೆ, ಪ್ರತಿಭೆಯ ಬಗ್ಗೆ, ನಾವೆಲ್ಲರೂ ಬಹಳ ಹತ್ತಿರದಿಂದ ನೋಡಿರುವಂಥವರು. ಅವರು ಒಳ್ಳೆಯ ಪ್ರತಿಭೆ ಇದ್ದರೂ, ಅವರಿಗೆ ಒಳ್ಳೆಯ ಅವಕಾಶಗಳು ಇರುವುದಿಲ್ಲ. ಅವರು ಅವಕಾಶದಿಂದ ವಂಚಿತರಾಗಿರುತ್ತಾರೆ , ಒಳ್ಳೆಯ ಕ್ರೀಡಾಂಗಣಗಳು ಇರುವುದಿಲ್ಲ. ಒಳ್ಳೆಯ ವ್ಯವಸ್ಥೆ ಇರುವುದಿಲ್ಲ. ಈ ವ್ಯವಸ್ಥೆಯನ್ನು ಸಂಪೂರ್ಣವಾಗಿ ಸರಿ ಮಾಡಬೇಕು. ಇವತ್ತು ಅನಿಲ್ ಕುಂಬ್ಳೆಯವರನ್ನು ನಾವು ಒಪ್ಪಿಕೊಳ್ಳುತ್ತೇವೆ. ಇವತ್ತು ಅನಿಲ್ ಕುಂಬ್ಳೆಯವರು ಮಾಡಿರುವಂತಹ ಸಾಧನೆ ಬಹಳ ದೊಡ್ಡ ಸಾಧನೆಯಾಗಿದೆ. ಅದೇ ರೀತಿಯಲ್ಲಿ ಎಲ್ಲಾ ವಿಭಾಗಗಳಲ್ಲೂ ಕೂಡ, ಬೇರೆ ಬೇರೆ ಕ್ರೀಡೆಗಳಲ್ಲೂ ಹೆಚ್ಚಿನ ಸಾಧನೆಯನ್ನು ಮಾಡಿರುವಂಥವರಿಗೆ, ಹೆಚ್ಚಿನ

ಪ್ರೋತ್ಸಾಹವನ್ನು ಸರ್ಕಾರದ ವತಿಯಿಂದ ಕೊಡಬೇಕು. ಅವರಿಗೆ ಎಲ್ಲಾ ರೀತಿಯ ಅನುದಾನವನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕೆನ್ನುತಕ್ಕಂಥ ಮಾತನ್ನು ಹೇಳುತ್ತಾ, ನಾನು ಮತ್ತೊಮ್ಮೆ ಅನಿಲ್ ಕುಂಬ್ಳೆಯವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ, ಶಶಿಯಂಥವರು, ಮತ್ತೆ ರಮೇಶ್ ಅಂಥವರು, ಅರ್ಜುನ್ ಪ್ರಶಸ್ತಿಯನ್ನು ತೆಗೆದುಕೊಂಡಿದ್ದಾರೆ. ಏಕಲವ್ಯ ಪ್ರಶಸ್ತಿಯನ್ನು ತೆಗೆದುಕೊಂಡಿದ್ದಾರೆ. ಅಂತಹ ಪ್ರಶಸ್ತಿಯನ್ನು ಪಡೆದಿರುವಂಥವರಿಗೆ ಒಂದು ನಿವೇಶನವನ್ನು ಕೊಡುವಂಥಾದ್ದು, ಅವರಿಗೆ ಒಳ್ಳೆಯ ರೀತಿಯಲ್ಲಿ ಪ್ರೋತ್ಸಾಹವನ್ನು ಕೊಡುವಂತಹ ಕೆಲಸವನ್ನು ನಮ್ಮ ಸರ್ಕಾರ ಮಾಡಬೇಕೆಂಬ ಮಾತನ್ನು ಹೇಳುತ್ತೇನೆ. ಇವತ್ತು ನಾವೆಲ್ಲರೂ ಸದನದಲ್ಲಿ ಯುವಕ ಶಾಸಕರು ಇದ್ದೇವೆ. ಈ ವಿಚಾರ ಬಂದಾಗ ನಾವು ಮಾತನಾಡಬೇಕು. ಯುವಜನ, ಕ್ರೀಡೆ, ವಿಚಾರಗಳನ್ನು ಮಾತನಾಡಬೇಕೆಂದು ಆಸಕ್ತಿ ಇರುತ್ತದೆ. ಅಂತಹ ಸಂದರ್ಭದಲ್ಲಿ ಹಿತಿಯ ಸದಸ್ಯರು ಒಳ್ಳೆಯ ರೀತಿಯಲ್ಲಿ ಪ್ರೋತ್ಸಾಹವನ್ನು ನೀಡಿ, ನಮಗೆ ಮಾತನಾಡಿ ಎಂದು ಹೇಳಬೇಕು, ಅದು ಬಿಟ್ಟು ಈ ವಿಚಾರ ಬಿಟ್ಟು ಕಬಡ್ಡಿ, ವಾಲಿಬಾಲ್, ಕೊಕ್ಕೋ, ಕಡೆಗೆ ಹೋಗುವಂಥಾದ್ದು ಸರಿಯಿಲ್ಲವೆನ್ನುವಂಥದ್ದು

ಅಧ್ಯಕ್ಷರು : ಆಯಿತು ಬಿಡಿ, ಹೇಳಿದ್ದೀರಲ್ಲಾ, ಅದನ್ನೇ ಏಕೆ ಮುಂದುವರೆಸುತ್ತೀರಿ ?

ಡಾ : ಕೆ. ಅನ್ನದಾನಿ : ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಹೇಳುತ್ತಾ, ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ. ಬಸವರಾಜು(ಏರಾಜಪೇಟೆ) : ಮಾನ್ಯ ಅಧ್ಯಕ್ಷರೇ, ಇವತ್ತು ಸದನದಲ್ಲಿ ಅನಿಲ್ ಕುಂಬ್ಳೆಯವರು ಮಾಡಿದಂತಹ ಸಾಧನೆಯನ್ನು ಗಮನಿಸಿ, ದೇಶದಾದ್ಯಂತ ಅವರಿಗೆ ಅಭಿನಂದನೆಯನ್ನು ತಲುಪಿಸುತ್ತಿರುವಂತಹ ಸಂದರ್ಭದಲ್ಲಿ, ನಾವೂ ಕೂಡ ಈ ಸದನದ ಮೂಲಕ ಅವರಿಗೆ ಅಭಿನಂದನೆಯನ್ನು ಸಲ್ಲಿಸುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ಈ ಬಗ್ಗೆ ನಮ್ಮ ಎಲ್ಲಾ ಹಿರಿಯ ಸದಸ್ಯರುಗಳು, ಹಾಗೂ ಕಿರಿಯ ಸದಸ್ಯರುಗಳು ಈ ವಿಚಾರವನ್ನು ಸವಿಸ್ತಾರವಾಗಿ ಹೇಳಿದ್ದಾರೆ. ಆದರೆ ನಾನು ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಹೇಳಲಿಚ್ಚಿಸುತ್ತೇನೆ. ಅನಿಲ್ ಕುಂಬ್ಳೆಯವರು ಸಾಧನೆಯನ್ನು ಮಾಡಿರುವಂಥಾದ್ದು, ನಮ್ಮ ರಾಜ್ಯದವರು ಹೆಮ್ಮೆ ಪಟ್ಟುಕೊಳ್ಳುವಂತಹ ವಿಚಾರವಾಗಿದೆ. ಆದರೆ ಅವರು ಸ್ಪಿನ್ ಮಾಡುತ್ತಿದ್ದಂತಹ ರೀತಿಯನ್ನು ವಿಶ್ವದವರೆಲ್ಲರೂ ಗಮನಿಸಿದ್ದಾರೆ. ಅದನ್ನು ನಾವು ಇಲ್ಲಿ ಹೇಳುವುದು ಉತ್ತಮವೆಂದು ನನಗೆ ಅನ್ನಿಸುತ್ತದೆ. ಅದು ದೇಶಿಯ ಸ್ಪಿನ್ ಆಗಿತ್ತು. ಆ ದೇಶಿಯ ಸ್ಪಿನ್ ಅನ್ನು ಇತರರು 'ಯಾವ ರೀತಿಯಲ್ಲಿ ಅಳವಡಿಸಿಕೊಳ್ಳಬೇಕೆಂದು ಪ್ರಯತ್ನವನ್ನು ಪಟ್ಟರೂ ಕೂಡ ಆ ದೇಶಿಯ ಸ್ಪಿನ್ ಅನ್ನು ಅಳವಡಿಸಿಕೊಳ್ಳಲು ಯಾವ ಒಬ್ಬ ಕ್ರೀಡಾ ಪಟುಗಳಿಗೂ ಆಗದೇ ಇರುವಂತಹ ಸಾಧನೆಯನ್ನು ಮಾಡುವುದರ ಮೂಲಕ 500 ವಿಕೆಟ್‌ಗಳನ್ನು ಪಡೆದು ಅವರು ಮಹತ್ ಸಾಧನೆಯನ್ನು ಮಾಡಿದ್ದಾರೆ. ಈ ದಾಖಲೆಯಲ್ಲಿ ಅವರು ನಮ್ಮ ದೇಶಕ್ಕೆ ಪ್ರಪ್ರಥಮರಾಗಿದ್ದಾರೆ, ಹಾಗೆಯೇ ವಿಶ್ವದಲ್ಲಿ ಮೂರನೆಯವರಾಗಿದ್ದಾರೆ. ಇದಕ್ಕೆ ನಾವು ಸಂತೋಷವನ್ನು ಪಡಬೇಕು, ಮತ್ತೆ ಒಂದು ನೆನಪನ್ನೂ ಕೂಡ ನಾವು ಮಾಡಿಕೊಳ್ಳಬೇಕಾಗುತ್ತದೆ. ಒಂದು ದಿವಸದ ಟೆಸ್ಟ್‌ನಲ್ಲಿ 10 ವಿಕೆಟ್‌ಗಳನ್ನು ಪಡೆದರು. ಆ 10 ವಿಕೆಟನ್ನು ಪಡೆದದ್ದು ಕೂಡ ಒಂದು ದಾಖಲೆ, ಬಹುಶ : ಇಂತಹ ದಾಖಲೆಯನ್ನು ಮಾಡಿರುವಂತಹ ಅನಿಲ್ ಕುಂಬ್ಳೆಯವರ ಬಗ್ಗೆ ಮಾತನಾಡಲು ಸದನದಲ್ಲಿ ತಾವು ಅವಕಾಶವನ್ನು ಕಲ್ಪಿಸಿಕೊಟ್ಟಿರುವಂಥಾದ್ದು ಒಳ್ಳೆಯ ವಿಚಾರವಾಗಿದೆ. ಇವತ್ತು

ಅವರು ಸಾಧನೆ ಮಾಡಿದ್ದು ಅಂತಲ್ಲ, ಅದನ್ನು ಅನುಕರಣೆ ಮಾಡಬೇಕೆಂಬುದು ಇವತ್ತು ಎಲ್ಲಾ ಗ್ರಾಮಾಂತರ ಪ್ರದೇಶಗಳಲ್ಲೂ ಇರುವಂತಹ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಬಂದಿದೆ. ಈಗಾಗಲೇ ಆ ಕಡೆಯ ಎಲ್ಲಾ ಸದಸ್ಯರು ಕೆಲವು ಕಾರ್ಯಕ್ರಮಗಳನ್ನು ಮಾಡಿ ಎಂದು ಹೇಳಿದರು. ಅವರಿಗೂ ವಿಫಲವಾದಂತಹ ಅವಕಾಶಗಳು ಇತ್ತು. ಆದರೆ ಅವರು ಮಾಡಿದರೋ, ಇಲ್ಲವೋ, ನಮಗೆ ಗೊತ್ತಿಲ್ಲ. ಆದರೆ ನಾನು ನಮ್ಮ ಸರ್ಕಾರದ ವತಿಯಿಂದ ನಾನು ಕೇಳುತ್ತಿದ್ದೇನೆ.

ಶ್ರೀ ನ.ಲ. ನರೇಂದ್ರ ಬಾಬು : ರಾಜಕೀಯವನ್ನು ಹೇಳುತ್ತಿದ್ದೀರಿ.

ಶ್ರೀ ಹೆಚ್.ಡಿ. ಬಸವರಾಜು : ರಾಜಕೀಯ ಇಲ್ಲ, ವಿಫಲವಾದಂತಹ ಅವಕಾಶ ಇತ್ತು, ಎಂದು ಹೇಳಿದೆನೆಯೇ, ಏನ: ಆ ವಿಫಲವಾದಂತಹ ಅವಕಾಶವನ್ನು ಬಳಸಿಕೊಂಡಿದ್ದರೆ ನಾನು ಈ ಮಾತನ್ನು ಆಡುತ್ತಿದ್ದೆನಾ ? ನಾನು ರಾಜಕೀಯವನ್ನು ಮಾತನಾಡುವುದಿಲ್ಲ, ಅದು ಬಿಡಿ. ಅವರಿಗೆ ವಿಫಲವಾದಂತಹ ಅವಕಾಶ ಇತ್ತು, ಅದು ಈಗ ಆ ಅವಕಾಶ ನಮ್ಮ ಈ ಭಾಗಕ್ಕೆ ಬಂದಿದೆ. ಇವತ್ತು ನಮ್ಮ ಸರ್ಕಾರವನ್ನು ಏನು ಕೇಳುತ್ತಿದ್ದೇನೆಂದರೆ, ಗ್ರಾಮಾಂತರ ಪ್ರದೇಶದಲ್ಲಿರುವಂಥವರಿಗೆ ಈ ಕ್ರಿಕೆಟ್ ಬಗ್ಗೆ ಹೆಚ್ಚಿನ ಉತ್ತೇಜನವನ್ನು ಕೊಡುವಂತಹ ದೃಷ್ಟಿಯಿಂದ, ಎಲ್ಲಾ ಶಾಲೆಗಳಿಗೆ ಕಾಲೇಜುಗಳಿಗೆ, ಕ್ರಿಕೆಟ್ ಕಿಟ್ ಅನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಿ, ಅವರಲ್ಲೂ ಕೂಡ ಈ ಪ್ರತಿಭೆ ಹೊರಹೊಮ್ಮಿ, ವಿಶ್ವದಲ್ಲೇ ದಾಖಲು ಆಗುವಂಥಾದ್ದು, ದೇಶದಲ್ಲೇ ದಾಖಲು ಆಗುವಂಥಾದ್ದು, ಈ ಮಟ್ಟದಲ್ಲಿ ಬೆಳೆಯುವಂತೆ ಪ್ರೋತ್ಸಾಹ ನೀಡುವಂಥಾದ್ದು ಸರ್ಕಾರ ಮಾಡಬೇಕೆಂದು ನನ್ನ ಅಭಿಮತ ಆಗಿದೆ. ನನಗೆ ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕೆ ತಮಗೆ ವಂದಿಸಿ, ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಇದನ್ನು ಇಲ್ಲಿಗೆ ಮುಕ್ತಾಯ ಮಾಡೋಣ, ಈಗ ಸಾಕಷ್ಟು ಚರ್ಚೆ ಆಗಿದೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಇದಕ್ಕೆ ಸರ್ಕಾರದ ಪರವಾಗಿ ಉತ್ತರ ಕೊಡುತ್ತೇನೆ.

ಅಧ್ಯಕ್ಷರು : ಏನು ಉತ್ತರ ಕೊಡುತ್ತೀರಿ ?

ಶ್ರೀ ಸಿದ್ದುಸವದಿ : ಮಾನ್ಯ ಅಧ್ಯಕ್ಷರೇ, ನನಗೆ ಒಂದು ನಿಮಿಷ ಅವಕಾಶವನ್ನು ಕೊಡಿ.

ಅಧ್ಯಕ್ಷರು : ನಿಮಗೆ ಬೇರೆ ಅವಕಾಶವನ್ನು ಕೊಡುತ್ತೇನೆ. ಸಾಕಷ್ಟು ಜನರು ಮಾತನಾಡಿದ್ದಾರೆ. ಆಯಿತು ಮಾತನಾಡಿ.

ಶ್ರೀ ಸಿದ್ದು ಸವದಿ (ಜಮಖಂಡಿ) : ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದ ಕ್ರಿಕೆಟ್ ಪಟು ಅನಿಲ್ ಕುಂಬ್ಳೆಯವರು ತಮ್ಮ ಮಾಂತ್ರಿಕ ಶಕ್ತಿಯಿಂದ, ಜಗತ್ತಿನ ಪ್ರತಿಭಾವಂತ ಬ್ಯಾಟ್ಸ್‌ಮನ್‌ಗಳನ್ನು ಸದೆಬಡಿದು, ನಮ್ಮ ದೇಶದ ನಮ್ಮ ರಾಜ್ಯದ ಕೀರ್ತಿಯನ್ನು ದಿಗಂತಕ್ಕೆ ಏರಿಸಿದ್ದಾರೆ. ಅವರನ್ನು ಅಭಿನಂದಿಸಲು ತಾವು ನಿರ್ಣಯವನ್ನು ತಂದಿದ್ದಕ್ಕೆ, ನಾನು ಬೆಂಬಲವನ್ನು ವ್ಯಕ್ತಪಡಿಸುತ್ತೇನೆ. ನಮ್ಮ ದೇಶದಲ್ಲಿ, ಅಥವಾ ನಮ್ಮ ರಾಜ್ಯದಲ್ಲಿ 110 ಕೋಟಿ ಜನಸಂಖ್ಯೆ ಇದ್ದರೂ ಸಹಿತ ಕ್ರೀಡೆಗೆ ಹೆಚ್ಚಿನ ಅವಕಾಶ ಸಿಗದೇ ಇದ್ದ ಕಾರಣ, ಜಗತ್ತಿನ ಒಲಿಂಪಿಕ್ಸ್‌ನಲ್ಲಿ ಜಗತ್ತಿನ ಸಣ್ಣಪುಟ್ಟ ರಾಷ್ಟ್ರಗಳು ಚಿನ್ನದ ಕೊಳ್ಳೆಯನ್ನು ಹೊಡೆಯುತ್ತಿದ್ದರೂ ಸಹ ನಾವು ಕೊನೆಯ ಸಾಲಿನಲ್ಲಿ ಬರುತ್ತಿರುವುದನ್ನು ನೋಡಿದರೆ

ನನಗೆ ಬಹಳ ವಿಷಾದವೆನಿಸುತ್ತದೆ. ಇದಕ್ಕೆ ಮೂಲ ಕಾರಣ ಕ್ರೀಡೆಗಳಿಗೆ ಸರ್ಕಾರಗಳು ಹೆಚ್ಚಿನ ಗಮನವನ್ನು ಕೊಡದೇ ಇರುವಂಥಾದ್ದು, ಎಂದು ನನಗನಿಸುತ್ತಾ ಇದೆ. ಅದಕ್ಕಾಗಿ ಇವತ್ತಿನ ದಿವಸ ನಮ್ಮ ಸರ್ಕಾರಗಳು ಕ್ರೀಡೆಗಳ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸಿ, ಇಂತಹ ಕ್ರೀಡಾಪಟುಗಳನ್ನು ಅಭಿನಂದಿಸುವುದರ ಜೊತೆಗೆ, ಕ್ರೀಡೆಗೆ ಹೆಚ್ಚಿನ ಅವಕಾಶವನ್ನು ಕಲ್ಪಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅದರ ಬಗ್ಗೆ ಒಂದೆರಡು ಮಾತುಗಳನ್ನು ಯಾವ ರೀತಿಯಾಗಿ ಕ್ರೀಡೆಗೆ ಅಥವಾ ಹಳ್ಳಿಗಾಡಿನಿಂದ ಬಂದಿರುವಂತಹ ಬಡ ಮಕ್ಕಳು ತಮ್ಮ ಪ್ರತಿಭೆಯನ್ನು ಬೆಳಕಿಗೆ ತರಲು ಆಗದೇ ಇರುವಂತಹ ಪರಿಸ್ಥಿಯಿರುವ ಸಂದರ್ಭಗಳನ್ನು ನಾನು ಹೇಳಬಯಸುತ್ತೇನೆ. ಈಗ ಉದಾಹರಣೆಗೆ ಹೇಳುವುದಾದರೆ ಬೆಂಗಳೂರು ನಗರದಲ್ಲಿರುವಂತಹ ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ನಾನು ಒಮ್ಮೆ ಹೋಗಿದ್ದೆ. ಅಲ್ಲಿ ನಮ್ಮ ಸರ್ಕಾರದ ಒಂದು ಟೆನಿಸ್ ಕೋರ್ಟ್ ಇದ್ದರೂ ಸಹಿತ, ಯಾರೋ ಒಬ್ಬ ಖಾಸಗಿ ವ್ಯಕ್ತಿಗೆ ಅದರ ಮೇಂಟ್ರೆನೆನ್ಸ್‌ಗೆ ಕೊಟ್ಟಿದ್ದರಿಂದ, ನಮ್ಮ ಸರ್ಕಾರದ ಕೋಚ್‌ಗಳೂ ಸಹಿತ ಹೆದರಿ, ಹೆದರಿ, ನಮ್ಮ ಸರ್ಕಾರ ಆಯ್ಕೆ ಮಾಡಿದಂತಹ ಕ್ರೀಡಾ ಪಟುಗಳಿಗೆ ಕೊಡುತ್ತಿರುವ ಅವಕಾಶವನ್ನು ನೋಡಿದರೆ, ನನಗೆ ಇದು ನಾಚಿಕೆಗೇಡು ಅನ್ನಿಸುತ್ತದೆ. ನಮ್ಮ ರಾಜ್ಯ ಸರ್ಕಾರ ಅಂತಹ ಒಂದು ಕ್ರೀಡಾಂಗಣವನ್ನು ಮೇಂಟೇನ್ ಮಾಡಿ, ಹಳ್ಳಿಗಾಡಿನಿಂದ ಬಂದಿರುವಂತಹ ಪ್ರತಿಭಾವಂತ ಕ್ರೀಡಾಪಟುಗಳಿಗೆ ಅವಕಾಶವನ್ನು ಕೊಟ್ಟು, ಅವರಿಗೆ ಕೋಚಿಂಗ್ ಕೊಡುವಂತಹ ವ್ಯವಸ್ಥೆಯ ಬಗ್ಗೆ ನಮ್ಮ ಸರ್ಕಾರ ಮನಸ್ಸು ಮಾಡಿದ್ದರೂ ಸಹಿತ ಅದನ್ನು ಒಬ್ಬ ಖಾಸಗಿಯವರಿಗೆ ಕೊಟ್ಟಿದ್ದು ಬಹಳ ವಿಷಾದವೆಂದು ನಾನು ಹೇಳಬಯಸುತ್ತೇನೆ. ಇನ್ನು ಅನೇಕ ಹಳ್ಳಿಗಾಡಿನ ಪ್ರದೇಶಗಳು, ಅದರಲ್ಲೂ ವಿಶೇಷವಾಗಿ ನಮ್ಮ ಜಮಖಂಡಿ ತಾಲ್ಲೂಕು ಕುಸ್ತಿ ಮತ್ತು ಸೈಕಲ್ ರೇಸ್‌ಗೆ ಬಹಳ ಹೆಸರು ಪಡೆದಿರುವಂಥಾದ್ದು. ಆ ಹಳ್ಳಿಗಾಡಿನ ಮಕ್ಕಳಿಗೆ ಹಣವನ್ನು ಕೊಟ್ಟು ಸೈಕಲ್ ಅನ್ನು ತೆಗೆದುಕೊಳ್ಳುವ ಶಕ್ತಿ ಇರುವುದಿಲ್ಲ. ಅವರು ಮೂರು-ನಾಲ್ಕು ವರ್ಷಗಳು ಅಲ್ಲಿ, ಇಲ್ಲಿ ಚಂದಾ ಹಣವನ್ನು ಎತ್ತುವ ಮೂಲಕ ಸೈಕಲ್ ಅನ್ನು ಪಡೆಯುವಂತಹ ದಯನೀಯ ಪರಿಸ್ಥಿತಿ ಇರುವುದರಿಂದ, ಅವರಿಗೆ ಸರ್ಕಾರ ಮನಸ್ಸು ಮಾಡಿ, ಅಂತಹ ಪ್ರತಿಭಾವಂತ ಕ್ರೀಡಾಪಟುಗಳಿಗೆ ಸೈಕಲ್‌ಗಳನ್ನು ಕೊಡಿಸುವಂತಹ ವ್ಯವಸ್ಥೆಯಾಗಬೇಕು. ಅದು ಆಗದೇ ಹೋದರೆ, ನಮ್ಮ ಸಂಸದರ ಮತ್ತು ಶಾಸಕರ ನಿಧಿಯಿಂದ ಇದಕ್ಕೆ ಅವಕಾಶವನ್ನು ಮಾಡಿಕೊಟ್ಟರೆ, ಆ ಕ್ರೀಡೆಗಳನ್ನು ಬೆಳಕಿಗೆ ತರಲು ಸಾಧ್ಯವಾಗುತ್ತದೆ.

ಎರಡನೆಯದಾಗಿ, ಅನಿಲ್ ಕುಂಬ್ಳೆಯವರಿಗೆ ಒಂದು ಕ್ರಿಕೆಟ್ ಸ್ಟೇಡಿಯಂ ಮಾಡಲು 10 ಎಕರೆ ಜಮೀನು ಕೊಡಿ ಎಂದು ಈಗಾಗಲೇ ನಮ್ಮ ಅನೇಕ ಹಿರಿಯ ಸದಸ್ಯರು ಹೇಳಿದರು. ಅದರಲ್ಲಿ ಎರಡು ಮಾತಿಲ್ಲ, ಅವರಿಗೆ ಜಮೀನು ಕೊಡಬೇಕು. ಅದಕ್ಕೂ ನಾನು ಬೆಂಬಲ ವ್ಯಕ್ತಪಡಿಸುತ್ತೇನೆ. ಆದರೆ ಅಲ್ಲಿ ಪ್ರತಿಭಾವಂತ ಬಡ ಮಕ್ಕಳಿಗೆ ಉಚಿತವಾಗಿ ಅಥವಾ ಕಡಿಮೆ ಫೀಸ್ ತೆಗೆದುಕೊಂಡು ಕಲಿಸುವಂಥ ವ್ಯವಸ್ಥೆಯಾಗಬೇಕು. ಈ ಸಂದರ್ಭದಲ್ಲಿ ನಾನು ಒಂದು ವಿಷಾದದ ಸಂಗತಿಯನ್ನು ಹೇಳಬಯಸುತ್ತೇನೆ. ಭೂಪತಿಯವರಿಗೆ, ಬೆಂಗಳೂರಿನಲ್ಲಿ ಟೆನಿಸ್ ಕ್ರೀಡಾಂಗಣಕ್ಕಾಗಿ ಸರ್ಕಾರ ಜಮೀನು ಕೊಟ್ಟಿದೆಯೋ, ಇಲ್ಲವೋ ಎನ್ನುವುದು ನನ್ನ ಕಲ್ಪನೆಯಲ್ಲಿಲ್ಲ. ಖ್ಯಾತಿವೆತ್ತ ಭೂಪತಿಯವರು ಬೆಂಗಳೂರಿನಲ್ಲಿ ಒಂದು ಟೆನಿಸ್ ಕ್ರೀಡಾಂಗಣ ಮಾಡಿದ್ದಾರೆ. ಅವರ ಫೀಸ್ ಎಷ್ಟಿದೆ ಎಂದರೆ, ಬಡಮಕ್ಕಳು ಆ ಕಡೆ ನೋಡುವುದಕ್ಕೂ ಆಗುವುದಿಲ್ಲ. ತಿಂಗಳಿಗೆ 30 ಸಾವಿರ

ರೂಪಾಯಿ ತೆಗೆದುಕೊಂಡು ಕೋಚಿಂಗ್ ಕೊಡುವಂಥ ವ್ಯವಸ್ಥೆ ಇದ್ದು, ಯಾವುದೇ ಬಡಮಕ್ಕಳು, ಎಲೆಮರೆಯಲ್ಲಿ ಇರುವಂಥ ಯಾವುದೇ ಪ್ರತಿಭಾವಂತ ವಿದ್ಯಾರ್ಥಿಗಳು ಅಲ್ಲಿಗೆ ಹೋಗಿ ಕೋಚಿಂಗ್ ತೆಗೆದುಕೊಳ್ಳಲು ಹೇಗೆ ಸಾಧ್ಯ ? ಕೆ.ಎಸ್.ಎಲ್.ಟಿ.ಎ.ಯಲ್ಲೂ ಸಹ ತಿಂಗಳಿಗೆ 30 ಸಾವಿರ ರೂಪಾಯಿ ತೆಗೆದುಕೊಂಡು ಕೋಚಿಂಗ್ ಕೊಡುವ ವ್ಯವಸ್ಥೆ ಇರುವುದರಿಂದ ಯಾವ ಬಡಮಕ್ಕಳೂ ಸಹ ತಮ್ಮ ಪ್ರತಿಭೆಯನ್ನು ಹೊರತರಲು ಸಾಧ್ಯವೇ ಇಲ್ಲ. ಅಂಥ ಒಂದು ವ್ಯವಸ್ಥೆ ಈ ರಾಜ್ಯದಲ್ಲಿದ್ದು, ಅದರ ಬಗ್ಗೆಯೂ ಲಕ್ಷ್ಯ ವಹಿಸಿ ಬಡಮಕ್ಕಳ ಪ್ರತಿಭೆಗೂ ಅವಕಾಶ ಸಿಗುವ ರೀತಿಯಲ್ಲಿ ಸರ್ಕಾರ ಅವಕಾಶ ಮಾಡಿಕೊಡಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಅದಲ್ಲದೇ, ಮಾನ್ಯ ಕ್ರೀಡಾಸಚಿವರು ತಾಲ್ಲೂಕಿಗೊಂದು ಕ್ರೀಡಾಭವನ ಮಾಡಬೇಕೆಂದು ನಿರ್ಣಯ ತೆಗೆದುಕೊಂಡಿದ್ದಾರೆ. ಅದು ಬಹಳ ಸ್ತುತ್ಯಾರ್ಹವಾದುದು. ಏಕೆಂದರೆ, ಅನೇಕ ತಾಲ್ಲೂಕುಗಳಲ್ಲಿ ಅನೇಕ ಕ್ರೀಡಾಪಟುಗಳಿದ್ದರೂ ಸಹ ಅವರಿಗೆ ಪ್ರಾಕ್ಟೀಸ್ ಮಾಡಲು ಯಾವುದೇ ಸೌಲಭ್ಯವಿಲ್ಲ. ನಾನು ಇನ್ನೊಮ್ಮೆ ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ, ಸರ್ಕಾರ ಕ್ರೀಡಾ ಇಲಾಖೆಗೆ ಹೆಚ್ಚಿನ ಅನುದಾನ ಕೊಡಬೇಕು. ವಿವಿಧ ಇಲಾಖೆಗಳ ಅಭಿವೃದ್ಧಿ ಕೆಲಸಗಳು ಎಷ್ಟು ಮಹತ್ವವೋ, ಅಷ್ಟೇ ಮಹತ್ವವಾದುದು ಕ್ರೀಡಾ ಇಲಾಖೆ ಎನ್ನುವ ನನ್ನ ವೈಯಕ್ತಿಕ ಅನಿಸಿಕೆಯನ್ನು ಹೇಳಬಯಸುತ್ತೇನೆ. ಏಕೆಂದರೆ, ನಾವು ಕ್ರೀಡೆಯಲ್ಲಿ ಪ್ರತಿಭಾವಂತರಾದರೆ ವಿವಿಧ ರಂಗಗಳಲ್ಲೂ ಸಹ ಕ್ರೀಡಾ ಮನೋಭಾವನೆ ಬೆಳೆದು . . . .

ಅಧ್ಯಕ್ಷರು : ಏನಿದು, ಕ್ರೀಡಾ ಇಲಾಖೆಯ ಬಗ್ಗೆ ಮಾತನಾಡಲು ನಿಂತುಕೊಂಡು ಬಿಟ್ಟಿರಲ್ಲಿ. ನೀವು ಏಕೆ ಅರ್ಥಮಾಡಿಕೊಳ್ಳುತ್ತಿಲ್ಲವೆನ್ನುವುದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಸಿದ್ದು ಸವದಿ : ಆಯಿತು, ಮುಗಿಸುತ್ತೇನೆ. ಕ್ರೀಡಾ ಇಲಾಖೆಗೆ ಇನ್ನೂ ಹೆಚ್ಚಿನ ಹಣವನ್ನು ಕೊಡಬೇಕೆಂದು ನಾನು ವಿನಂತಿ ಮಾಡಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ. ಪಾಪರೆಡ್ಡಿ (ರಾಯಚೂರು): ಸನ್ಮಾನ್ಯ ಅಧ್ಯಕ್ಷರೇ, ಅನಿಲ್ ಕುಂಬ್ಳೆಯವರಿಗೆ ಅಭಿನಂದನೆ ಸಲ್ಲಿಸುವ ಅಭಿನಂದನಾ ನಿರ್ಣಯವನ್ನು ತಂದಿರುವುದು ಉತ್ತಮವಾದ ಕೆಲಸ. ರಾಷ್ಟ್ರಮಟ್ಟದಲ್ಲಿ ಒಳ್ಳೆಯ ಹೆಸರು ಮಾಡಿರತಕ್ಕಂಥ ವ್ಯಕ್ತಿಗೆ ಈ ಒಂದು ಅಭಿನಂದನಾ ನಿರ್ಣಯ ತಂದಿರುವುದು ಉತ್ತಮವಾದಂಥ ಕೆಲಸವಾಗಿದೆ. ಅದಕ್ಕೆ ನಾನು ಬೆಂಬಲ ಸೂಚಿಸುತ್ತೇನೆ. ಈಗಾಗಲೇ ನಮ್ಮ ಅನ್ನದಾನಿಯವರು ಮಾತನಾಡಿದ ಪ್ರಕಾರ ಕಬಡ್ಡಿಯಲ್ಲೂ ಬಹಳಷ್ಟು ಒಳ್ಳೆಯ ಕ್ರೀಡಾಪಟುಗಳಿದ್ದಾರೆ, ಕುಸ್ತಿಯಲ್ಲೂ ಇದ್ದಾರೆ, ಖೋ ಖೋದಲ್ಲಿದ್ದಾರೆ; ಇವುಗಳು ನಮ್ಮ ದೇಶೀಯ ಆಟಗಳು. ಇವುಗಳಿಗೂ ಹೆಚ್ಚಿನ ಪ್ರೋತ್ಸಾಹ ಸಿಗಬೇಕು. ಅದೇ ರೀತಿ ಗ್ರಾಮಾಂತರ ಪ್ರದೇಶಗಳ ಕ್ರೀಡಾಪಟುಗಳು ಅಲ್ಲಿ ಗೆದ್ದು, ನಂತರ ಅವರು ಜಿಲ್ಲಾ ಮಟ್ಟದಲ್ಲಿ, ರಾಜ್ಯ ಮಟ್ಟದಲ್ಲಿ ಪಾರ್ಟಿಸಿಪೇಟ್ ಮಾಡಿದಾಗ ಅವರಿಗೆ ಕೊಡುವಂಥ ಭತ್ಯೆ 30 ರೂಪಾಯಿಗಳಾಗಿದೆ. ಈ 30 ರೂಪಾಯಿಗಳಲ್ಲಿ ಗ್ರಾಮಾಂತರ ಪ್ರದೇಶಗಳಿಂದ ಬಂದಂಥ ಮಕ್ಕಳು ಯಾವ ರೀತಿಯಲ್ಲಿ ಕ್ರೀಡೆಗಳಲ್ಲಿ ಭಾಗವಹಿಸಬೇಕು. ಆದ್ದರಿಂದ, ನಾನು ತಮ್ಮ ಮುಖಾಂತರ ಕ್ರೀಡಾ ಸಚಿವರಲ್ಲಿ ವಿನಂತಿ ಮಾಡುತ್ತೇನೆ, ಕಳೆದ 20 ವರ್ಷಗಳ ಕೆಳಗೆ ಇದ್ದಂಥ ಭತ್ಯೆ ಈಗಲೂ ಇದ್ದು, ಅದು ಬದಲಾವಣೆಯಾಗಬೇಕು, ಈಗ ಕೊಡುವಂಥ ಭತ್ಯೆ ಹೆಚ್ಚಾಗಬೇಕು. ಆ ರೀತಿಯಾದಾಗಲೇ, ಹಳ್ಳಿಗಾಡಿನಲ್ಲಿರತಕ್ಕಂಥ ಗ್ರಾಮಾಂತರ

ಪ್ರದೇಶಗಳಲ್ಲಿರತಕ್ಕಂಥ ಕ್ರೀಡಾಪಟುಗಳು ಜಿಲ್ಲಾಮಟ್ಟದಲ್ಲಿ ಮತ್ತು ರಾಜ್ಯಮಟ್ಟದಲ್ಲಿ ಬಂದು ಆಟವಾಡಲಿಕ್ಕೆ ಅನುಕೂಲವಾಗುತ್ತದೆ. ಎಲ್ಲಿಯವರೆಗೆ ಇದು ಬದಲಾವಣೆಯಾಗುವುದಿಲ್ಲವೋ, ಅಲ್ಲಿಯವರೆಗೆ ಉತ್ತಮ ಕ್ರೀಡಾಪಟುಗಳು ಬಂದು ಆಟವಾಡಲು ಅವಕಾಶವಾಗುವುದಿಲ್ಲ. ಆ ಕಾರಣದಿಂದ, ಈ ಭತ್ಯೆಯನ್ನು ಹೆಚ್ಚು ಮಾಡಬೇಕೆಂದು ತಮ್ಮ ಮುಖಾಂತರ ಕ್ರೀಡಾ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಂಡು, ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

ಅಧ್ಯಕ್ಷರು : ಈ ವಿಷಯವನ್ನು ದಯಮಾಡಿ ಇಲ್ಲಿಗೆ ಮುಗಿಸೋಣ. ಈಗ ರೆಗ್ಯೂಲರ್ ಬಿಸಿನೆಸ್‌ಗೆ ಹೋಗೋಣ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ . . . .

ಅಧ್ಯಕ್ಷರು : ತಾವು ರಿಯಾಕ್ಟ್ ಮಾಡುವಿರಾ ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೇ, ನಾನು ಮಾತನಾಡುತ್ತೇನೆ. ಅನಿಲ್ ಕುಂಬ್ಳೆಯವರ ಸಾಧನೆಗಾಗಿ ಅಭಿನಂದನೆ ಸಲ್ಲಿಸುವ ಸೂಚನೆಯನ್ನು ತಾವು ತಂದಿರುವುದಕ್ಕೆ ನಾವು ಬೆಂಬಲವನ್ನು ವ್ಯಕ್ತಪಡಿಸಿ, ಈ ಸದನ ಅನಿಲ್ ಕುಂಬ್ಳೆಯವರ ಸಾಧನೆಯನ್ನು ಮೆಚ್ಚುತ್ತದೆ ಮತ್ತು ನಾವು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇವೆ. ಅನಿಲ್ ಕುಂಬ್ಳೆಯವರು ಕರ್ನಾಟಕದ ಹೆಮ್ಮೆಯ ಪುತ್ರ. ಕ್ರಿಕೆಟ್ ಕ್ರೀಡೆಯಲ್ಲಿ, ಇಡೀ ರಾಷ್ಟ್ರದಲ್ಲೇ ಒಂದು ದಾಖಲೆಯ ಸ್ಥಾಪನೆಯನ್ನು ಅನಿಲ್ ಕುಂಬ್ಳೆಯವರು ಮಾಡಿದ್ದಾರೆ. 500ಕ್ಕೂ ಹೆಚ್ಚು ವಿಕೆಟ್‌ಗಳನ್ನು ಪಡೆದುಕೊಂಡಂಥ ಕೀರ್ತಿ ಅವರದು. ಅಂತರರಾಷ್ಟ್ರೀಯ ಮಟ್ಟದಲ್ಲಿ ಐದನೆಯವರಾಗಿ ಅವರು ಈ ಸಾಧನೆಯನ್ನು ಮಾಡಿದ್ದಾರೆ. ಅವರು ಮೊದಲ ಸ್ಥಾನದಲ್ಲಿ ಬರಬೇಕು, ಇಡಿ ವಿಶ್ವಕ್ಕೇ ದಾಖಲೆ ಸ್ಥಾಪನೆ ಮಾಡಬೇಕು ಎನ್ನುವ ವಿಶ್ವಾಸವನ್ನಿಟ್ಟುಕೊಂಡು, ಅವರಿಗೆ ಈ ಸಂದರ್ಭದಲ್ಲಿ ಹಾರೈಕೆಯನ್ನು ವ್ಯಕ್ತಪಡಿಸುತ್ತಿದ್ದೇವೆ. ಕರ್ನಾಟಕದ ಹಲವಾರು ಕ್ರೀಡಾಪಟುಗಳು ವಿಶ್ವಮಾನ್ಯರಾಗಿದ್ದು, ಇವತ್ತು ಅದು ನಮ್ಮ ಮುಂದಿದೆ. ಚಂದ್ರಶೇಖರ್‌ರವರು ಇರಬಹುದು, ಪ್ರಸನ್ನರವರು ಇರಬಹುದು, ಜಾಮಗಲ್ ಶ್ರೀನಾಥ್‌ರವರು ಇರಬಹುದು, ಜಾಮಗಲ್ ಶ್ರೀನಾಥ್‌ರವರು ಬೌಲಿಂಗ್‌ನಲ್ಲಿ ಪ್ರಸಿದ್ಧರಾದಂಥವರು. ಅದೇ ರೀತಿ, ಬ್ಯಾಟಿಂಗ್‌ನಲ್ಲಿ ಸಹ ಇದ್ದಾರೆ. ಇವತ್ತು ರಾಹುಲ್ ದ್ರಾವಿಡ್‌ರವರು ತಂಡದ ಕ್ಯಾಪ್ಟನ್ ಆಗಿ ಉತ್ತಮವಾದಂಥ ಸೇವೆಯನ್ನು ಮಾಡುತ್ತಿದ್ದಾರೆ. ಕರ್ನಾಟಕ ರಾಜ್ಯ ಉತ್ತಮವಾದಂಥ ಕ್ರೀಡಾಪಟುಗಳನ್ನು ಕೊಟ್ಟಂಥ ಒಂದು ಕೀರ್ತಿ ಪಡೆದಿದ್ದು, ಇವತ್ತು ಅನಿಲ್ ಕುಂಬ್ಳೆಯವರ ಸಾಧನೆಯ ಮುಖಾಂತರ ಅದಕ್ಕೆ ಇನ್ನೂ ಹೆಚ್ಚಿನ ಹೆಮ್ಮೆ ತರುವಂಥಾದ್ದಾಗಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ತಮ್ಮ ಅಭಿನಂದನಾ ಸೂಚನೆಯ ಬಗ್ಗೆ ಈಗಾಗಲೇ ಮಾತನಾಡಿದಂಥ ಅನೇಕ ಮಾನ್ಯ ಹಿರಿಯ ಸದಸ್ಯರುಗಳು ಮತ್ತು ಇನ್ನಿತರ ಶಾಸಕರುಗಳು ಬಹಳಷ್ಟು ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. ಅನಿಲ್ ಕುಂಬ್ಳೆಯವರಿಗೆ ಸರ್ಕಾರದ ಪರವಾಗಿ ಸನ್ಮಾನವನ್ನು ಮಾಡುವ ಕುರಿತು ನಾವು ಚಿಂತನೆಯನ್ನು ಮಾಡುತ್ತಿದ್ದೇವೆ. ಅವರಿಗೆ ಗೌರವವನ್ನು ಕೊಡುವಂಥ ಕೆಲಸ ನಾವು ಮಾಡುವಂಥಾದ್ದು ಇದೆ. ಈಗಾಗಲೇ ಹಿರಿಯ ಶಾಸಕರು ಮತ್ತು ಇನ್ನಿತರ ಶಾಸಕ ಮಿತ್ರರು ಹಲವಾರು ವಿಚಾರಗಳನ್ನು ವ್ಯಕ್ತಪಡಿಸಿದ್ದು, ಒಂದು ಕ್ರಿಕೆಟ್ ಅಕಾಡೆಮಿಯನ್ನು ನಿರ್ಮಾಣ ಮಾಡಿ, ಅನಿಲ್ ಕುಂಬ್ಳೆಯವರನ್ನು ಅದಕ್ಕೆ ಅಧ್ಯಕ್ಷರನ್ನಾಗಿ ಮಾಡಿ, ಆ ಅಕಾಡೆಮಿಯ ಮುಖಾಂತರ ಇನ್ನಿತರ ಕ್ರೀಡಾಪಟುಗಳಿಗೆ

ಮಾರ್ಗದರ್ಶನ ಸಿಗಬೇಕು ಎನ್ನುವ ವಿಚಾರವನ್ನು ವ್ಯಕ್ತಪಡಿಸಿದ್ದು, ಸರ್ಕಾರವು ಅದರ ಪರವಾಗಿದೆ ಮತ್ತು ಈ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳ ಜೊತೆ ಸಮಾಲೋಚನೆ ಮಾಡಿ ಮಾತನಾಡುತ್ತೇನೆ. ಅದು ಈ ಒಂದು ಅಕಾಡೆಮಿ ಸ್ಥಾಪನೆ ಮಾಡುವ ಬಗ್ಗೆ ಇರಬಹುದು, ಅದಕ್ಕೆ ಜಮೀನು ಕೊಡುವಂಥಾದ್ದರ ಬಗ್ಗೆ ಇರಬಹುದು, ನಾವು ಅವರ ಜೊತೆ ಮಾತನಾಡಿ ಒಂದು ನಿರ್ಣಯವನ್ನು ಕೈಗೊಳ್ಳುತ್ತೇವೆ. ಸರ್ಕಾರ ಅದರ ಪರವಾಗಿದೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತಿದ್ದೇನೆ.

ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು):– ತಾವು ರೆವಿನ್ಯೂ ಮಿನಿಸ್ಟರ್ ಇದ್ದೀರಿ, ಸ್ಪೋರ್ಟ್ಸ್ ಮಿನಿಸ್ಟರ್ ಸಹಾ ಇದ್ದಾರೆ, ನೀವು ಅವರ ಹತ್ತಿರ ಕನ್ಸಲ್ಟ್ ಮಾಡಿದರೆ ಅವರು ಬೇಡ ಎಂದು ಹೇಳುತ್ತಾರೇನು ? ತಾವು ದೊಡ್ಡ ಮನಸ್ಸು ಮಾಡಿ, ಮೊದಲು ಅನೌನ್ಸ್ ಮಾಡಿ, 10 ಎಕರೆ ಜಮೀನನ್ನು ಕೊಡುತ್ತಿದ್ದೇವೆ ಎಂದು ಹೇಳಿಬಿಟ್ಟರೆ ಬಹಳ ಸಂತೋಷ. ನಾವೆಲ್ಲಾ ಚಪ್ಪಾಳೆ ಹೊಡೆದುಬಿಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : ಈಗಾಗಲೇ ನಾವು ಹೇಳಿದೆವಲ್ಲಾ, ನಾವು ಅದರ ಪರವಾಗಿದ್ದೇವೆ. ಅದರ ಬಗ್ಗೆ ಒಂದು ಸ್ಪಷ್ಟವಾದ ಪ್ರಪೋಸಲನ್ನು ತೆಗೆದುಕೊಂಡು, ಅಕಾಡೆಮಿ ಯಾವ ರೀತಿ ಇರಬೇಕು ಎನ್ನುವಂಥಾದ್ದು, ಜಮೀನನ್ನು ಯಾವ ರೀತಿ ಉಪಯೋಗ ಮಾಡಬೇಕು ಎನ್ನುವಂಥಾದ್ದರ ಬಗ್ಗೆ ಒಂದು ಪ್ರಪೋಸಲ್ ಅನ್ನು ತರುತ್ತೇವೆ. ನಾವು ಇದರ ಪರವಾಗಿದ್ದೇವೆ, ಜಮೀನು ಕೊಡಲು ನಾವು ಹಿಂದೇಟು ಹಾಕುವುದಿಲ್ಲ, ಜಮೀನು ಕೊಡುತ್ತೇವೆ, ಅದರ ಬಗ್ಗೆ ಎರಡನೆ ಪ್ರಶ್ನೆಯೇ ಇಲ್ಲ, ಆದರೆ ಅದು ಯಾವ ರೀತಿ ಇರಬೇಕು ಎನ್ನುವ ಬಗ್ಗೆ ಒಂದು ಸ್ಪಷ್ಟವಾದಂಥ ಪ್ರಪೋಸಲ್‌ನ್ನು ತೆಗೆದುಕೊಂಡು, ನಾವು ಒಂದು ನಿರ್ಣಯವನ್ನು ಕೈಗೊಳ್ಳಲಿದ್ದೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತೆಗೆದುಕೊಂಡುಬಂದು, ತಮ್ಮ ನಿರ್ಣಯಕ್ಕೆ ನಾವು ಬೆಂಬಲವನ್ನು ವ್ಯಕ್ತಪಡಿಸುತ್ತಿದ್ದೇವೆ.

ಶ್ರೀ ಆಲ್ಕೋಡ್ ಹನುಮಂತಪ್ಪ (ಕ್ರೀಡಾ ಮತ್ತು ಯುವಜನಸೇವಾ ಸಚಿವರು) : ಮಾನ್ಯ ಅಧ್ಯಕ್ಷರೇ, ನಮ್ಮ ಇಲಾಖೆಯ ಬಗ್ಗೆ ಬಹಳಷ್ಟು ಚರ್ಚೆಗಳು ಈ ಭಾಗದಲ್ಲಿ ಮತ್ತು ಆ ಕಡೆ ಭಾಗದಲ್ಲಿ ನಡೆದಿದೆ. ನಮ್ಮ ರಾಜ್ಯದ ಕೀರ್ತಿಯ ಪುತ್ರ ಅನಿಲ್ ಕುಂಬ್ಳೆಯವರು ಇವತ್ತು ದೊಡ್ಡ ಸಾಧನೆಯನ್ನು ಮಾಡಿದ್ದು, ಅದಕ್ಕಾಗಿ ಇಡೀ ರಾಜ್ಯದವರು ಮತ್ತು ರಾಜ್ಯ ಸರ್ಕಾರ ಅಭಿನಂದಿಸುತ್ತದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಅವರು ಈ ಕ್ರೀಡೆಯಲ್ಲಿ 500 ವಿಕೆಟ್ಟನ್ನು ಪಡೆದು ವಿಶ್ವದಾಖಲೆಯನ್ನು ಸ್ಥಾಪನೆ ಮಾಡಿದ್ದಾರೆ. ಇವರು ಸ್ಪಿನ್ನರ್ ಬೌಲರ್ ಆಗಿ, ಇದರಲ್ಲಿ ಮೂರನೆಯವರಾಗಿದ್ದಾರೆ ಎನ್ನುವುದನ್ನು ಕೇಳಿ, ನಮ್ಮ ರಾಜ್ಯ ಅತ್ಯಂತ ಸಂತೋಷವನ್ನು ವ್ಯಕ್ತಪಡಿಸುತ್ತದೆ. ಆ ಭಾಗದಲ್ಲಿರುವಂಥ ಶ್ರೀ ಡಿ.ಕೆ. ಶಿವಕುಮಾರ್‌ರವರು ಮತ್ತು ಹಿರಿಯ ಸದಸ್ಯರುಗಳೆಲ್ಲರೂ ಏನು ಪ್ರಸ್ತಾಪ ಮಾಡಿದ್ದಾರೆ, ಅದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸುತ್ತದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದರ ಜೊತೆಗೆ, ಕ್ರೀಡಾಂಗಣದ ಬಗ್ಗೆ ಇವತ್ತು ಅನೇಕ ಶಾಸಕರುಗಳು ಪ್ರಸ್ತಾಪ ಮಾಡಿದ್ದಾರೆ, 12ನೇ ಹಣಕಾಸು ಯೋಜನೆಯಲ್ಲಿ ಕೇಂದ್ರ ಸರ್ಕಾರದ ಒಂದು ನೂರು ಕೋಟಿ ರೂಪಾಯಿ ಇದೆ ಎನ್ನುವುದನ್ನು ತಮ್ಮ ಗಮನಕ್ಕೆ ತರಲು ಬಯಸುತ್ತೇನೆ. ಇದರಲ್ಲಿ ನಾವು ಪ್ರತಿಯೊಂದು ತಾಲ್ಲೂಕಿಗೆ, ಐದೈದು ಎಕರೆ ಜಮೀನು ಕೊಟ್ಟಂಥ

ಸಂದರ್ಭದಲ್ಲಿ, ಅಲ್ಲಿ ನಾವು ಕ್ರೀಡಾಂಗಣಗಳನ್ನು ಮಾಡಬೇಕು ಎಂದು ತೀರ್ಮಾನ ಮಾಡಿದ್ದೇವೆ. ಅವರು ಪ್ರಸ್ತಾಪ ಮಾಡಿದ್ದರಿಂದ ಹೇಳಬೇಕಾಗುತ್ತದೆ, ಆ ಕಾರಣಕ್ಕಾಗಿ ಇದನ್ನು ಮಾಡಬೇಕಾಗುತ್ತದೆ. ಇನ್ನೊಂದು ವಿಷಯವೆಂದರೆ, ನೆನ್ನೆಯ ದಿವಸ ವೈಟ್ ಲಿಫ್ಟಿಂಗ್‌ನಲ್ಲಿ ಕುಂಜುರಾಣಿಯವರು ಭಾರತದಿಂದ ಸ್ಪರ್ಧೆ ಮಾಡಿ,

ಶ್ರೀ ಡಿ.ಕೆ. ಶಿವಕುಮಾರ್ : ಕುಂಭೆಯವರಿಗೆ ಏನು ಕೊಡುತ್ತೀರಿ ಎಂದು ತಾವು ಹೇಳಿ.

ಶ್ರೀ ಬಸವರಾಜ ರಾಯರೆಡ್ಡಿ : ಸದನದಲ್ಲಿ ನಿಯಮಾವಳಿಗಳು ಇವೆಯೋ, ಇಲ್ಲವೋ,? ದಯಮಾಡಿ ಹೇಳಿ, ಯಾರು ಬೇಕಾದರೂ, ಏನು ಬೇಕಾದರೂ ಮಾತನಾಡಬಹುದೇ ? ಬಜೆಟ್‌ಗೆ ರಿಪ್ಲೈ ಕೊಟ್ಟಹಾಗೆ ಕೊಡುತ್ತಿದ್ದಾರೆ. ಒಂದು ಅಭಿನಂದನೆ ಸಲ್ಲಿಸಬೇಕು ಎಂದರೆ, ಅಭಿನಂದನೆ ಸಲ್ಲಿಸುವ ಬಗ್ಗೆ ಮಾತನಾಡಬಹುದು.

(ಗೊಂದಲ)

ಅಧ್ಯಕ್ಷರು: ಮಾನ್ಯ ರಾಯರೆಡ್ಡಿಯವರೇ, ನೀವು ಹಿರಿಯ ಸದಸ್ಯರು. ಬಹಳ ಜನ ಯುವಕ ಸದಸ್ಯರು ಇದರ ಬಗ್ಗೆ ಮಾತನಾಡಬೇಕೆಂಬ ಆಶಯವನ್ನು ವ್ಯಕ್ತ ಮಾಡಿದ್ದಾರೆ. ನಿಮ್ಮ ಮುಖಂಡರು ಹಿರಿಯರಿದ್ದಾರೆ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ರಾಯರೆಡ್ಡಿಯವರು ದಯಮಾಡಿ ನಿಯಮಾವಳಿಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು: ಸರ್ಕಾರದ ಪರವಾಗಿ ಅವರು react ಮಾಡುತ್ತಿದ್ದಾರೆ. ನಿಯಮಾವಳಿಗಳ ಪ್ರಕಾರವೇ ನಡೆಯುತ್ತಿದೆ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ: ಮಾನ್ಯ ರಾಯರೆಡ್ಡಿಯವರು ದಯವಿಟ್ಟು ನಿಯಮಾವಳಿಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. Minister ರವರು Sports ಬಗ್ಗೆ ಮಾತನಾಡುತ್ತಿದ್ದಾರೆ. ಕುಂಭೆ ಜೊತೆಗೆ ಅವರನ್ನೂ ಸೇರಿಸಿಕೊಂಡಿದ್ದಾರೆ. ಅದರಲ್ಲಿ ಏನೂ ತೊಂದರೆ ಇಲ್ಲ. ನಿಯಮಾವಳಿ ಬಿಟ್ಟು ಏನೂ ಹೋಗಿಲ್ಲ. ದಯಮಾಡಿ ಅದನ್ನು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಆಲೋಡ್ ಹನುಮಂತಪ್ಪ: ಮಾನ್ಯ ಅಧ್ಯಕ್ಷರೆ, ಈ ಭಾಗದಲ್ಲಿ ಏನು ಮಾನ್ಯ ಸದಸ್ಯರು ಸಲಹೆ ಕೊಟ್ಟಿದ್ದಾರೆ, ಅದನ್ನು ಗಂಭೀರವಾಗಿ ಪರಿಗಣಿಸುತ್ತೇವೆ. ಈ ಸಂದರ್ಭದಲ್ಲಿ , ಈ ಸದನ ನಡೆಯುವಂಥ ಸಂದರ್ಭದಲ್ಲಿ ನಾವು ಅನಿಲ್ ಕುಂಬ್ಳೆಯವರನ್ನು ಮತ್ತು ದ್ರಾವಿಡ್‌ರವರನ್ನು ಕರೆಸಿ ಈ ಬ್ಯಾಂಕ್ವೆಟ್ ಹಾಲ್‌ನಲ್ಲಿ ಸರ್ಕಾರ ಅವರನ್ನು ಅಭಿನಂದಿಸತಕ್ಕಂಥ ಕೆಲಸವನ್ನು ಮಾಡುತ್ತದೆ ಎನ್ನುವ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ): ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಮಾನ್ಯ ಕಂದಾಯ ಸಚಿವರ ಮಾತುಗಳನ್ನು ಮತ್ತು ಕ್ರೀಡಾ ಇಲಾಖೆಯ ಮಾನ್ಯ ಮಂತ್ರಿಗಳ ಮಾತನ್ನೂ ಸಹಿತ ನಾನು ಕೇಳಿದ್ದೇನೆ. ಈ ಸದನದಲ್ಲಿ ಮಂಡಿಸಿರತಕ್ಕಂಥ ನಿರ್ಣಯಕ್ಕೆ ಮಾನ್ಯ ಕುಂಭ್ಳೆಯವರಿಗೆ ಅಭಿನಂದಿಸತಕ್ಕಂಥ ವಿಚಾರದಲ್ಲಿ ನಾನೂ ಸಹ ಸಹಭಾಗಿಯಾಗಿ ಒಂದು ಸಲಹೆಯನ್ನು ಸರ್ಕಾರಕ್ಕೆ ಕೊಡಲಿಕ್ಕೆ ಬಯಸುತ್ತೇನೆ. ಈಗಾಗಲೇ ಭಾರತದ ಕ್ರಿಕೆಟ್ ನಿಯಂತ್ರಣ ಮಂಡಳಿಯವರು ಕರ್ನಾಟಕದ ಕ್ರಿಕೆಟ್ ನಿಯಂತ್ರಣ ಮಂಡಳಿಯವರಿಗೆ ಕ್ರಿಕೆಟ್ ಅಕಾಡೆಮಿಯನ್ನು ಪ್ರಾರಂಭ ಮಾಡಲಿಕ್ಕೆ ಪರವಾನಗಿಯನ್ನು ಕೊಟ್ಟು ಹಣವನ್ನೂ ಸಹ ಕೊಟ್ಟಿದ್ದಾರೆ ಮತ್ತು ಸರ್ಕಾರದಿಂದ ಅದಕ್ಕೆ ಬೇಕಾಗಿರತಕ್ಕಂಥ ಜಮೀನನ್ನು ಸಹಿತ ಗುರುತಿಸಿ ಕೊಡಲಾಗಿದೆ.

ಶ್ರೀ ಅಂಜನಮೂರ್ತಿ: ಮಾನ್ಯ ಅಧ್ಯಕ್ಷರೆ, ೨೫ ಎಕರೆ ಜಮೀನನ್ನು ನನ್ನ constituency ನಲ್ಲಿಯೇ ಕೊಟ್ಟಿದೆ. ಇನ್ನೇನಾದರೂ ಕುಂಭ್ಳೆಗೆ ಕೊಡುವುದಿದ್ದರೆ ರಾಮನಗರದಲ್ಲಿ ಅಥವಾ ಬಿಡದಿಯಲ್ಲಿ ಎಲ್ಲಿಯಾದರೂ ಕೊಡುವುದಕ್ಕೆ ವ್ಯವಸ್ಥೆ ಮಾಡಲಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಈಗಾಗಲೇ ಜಮೀನನ್ನು ಸಹಿತ ಸರ್ಕಾರದಿಂದ ಕೊಡಲಾಗಿದೆ ಮತ್ತು ಕರ್ನಾಟಕದ ಕ್ರಿಕೆಟ್ ಮಂಡಳಿಯವರು ಅದನ್ನು ಈಗಾಗಲೇ ನಡೆಸುತ್ತಿದ್ದಾರೆ. ನಾನು ಇತ್ತೀಚೆಗೆ ದೆಹಲಿಗೆ ಹೋದಂಥ ಸಂದರ್ಭದಲ್ಲಿ ಭಾರತದ ಕ್ರಿಕೆಟ್ ಮಂಡಳಿಯ ಅಧ್ಯಕ್ಷರಾದ ಮಾನ್ಯ ಶರದ್ ಪವಾರ್‌ರವರನ್ನು ನಾವು ಭೇಟಿ ಮಾಡಿದಾಗ ಈ ವಿಚಾರ ಪ್ರಸ್ತಾಪವಾಯಿತು. ಸರ್ಕಾರಕ್ಕೆ ತಮ್ಮ ಮೂಲಕವಾಗಿ ಸಲಹೆ ಮಾಡುತ್ತಿದ್ದೇನೆ ಮತ್ತು ವಿನಂತಿಯನ್ನು ಸಹಿತ ಮಾಡುತ್ತಿದ್ದೇನೆ. ಅದೇನೆಂದರೆ, ನಾವು ಬಿ.ಎಸ್. ಚಂದ್ರಶೇಖರ್‌ರವರಂಥ, ಪ್ರಸನ್ನರವರಂಥ ವಿಶ್ವನಾಥ್‌ರವರಂಥ ಅನೇಕ ಕ್ರೀಡಾಪಟುಗಳನ್ನು ಜಗತ್ತಿಗೆ ಕೊಟ್ಟಿರುವುದರಿಂದಾಗಿ ಭಾರತದ ಕ್ರಿಕೆಟ್ ಮಂಡಳಿಯ ಅಧ್ಯಕ್ಷರು ಕರ್ನಾಟಕ ರಾಜ್ಯಕ್ಕೆ ವಿಶೇಷವಾಗಿ ಕರ್ನಾಟಕದ ಕ್ರಿಕೆಟ್ ಮಂಡಳಿಗೆ ಹೆಚ್ಚಿಗೆ ಹಣವನ್ನು ಕೊಡಲಿಕ್ಕೆ ಸಹಿತ ತಯಾರಿದ್ದಾರೆ. ಅದಕ್ಕೆ ತಾವು ದಯವಿಟ್ಟು ಸರ್ಕಾರದ ಪರವಾಗಿ ಮುಖ್ಯಮಂತ್ರಿಗಳ ಜೊತೆಯಲ್ಲಿ ಅವರಿಗೆ ಭೇಟಿ ಮಾಡಿ ಆ ಹಣವನ್ನೂ ಸಹಿತ ಕರ್ನಾಟಕ ಕ್ರಿಕೆಟ್ ಮಂಡಳಿಗೆ ಕೊಟ್ಟು ಆ ಅಕಾಡೆಮಿಗೆ ಅನಿಲ್ ಕುಂಭ್ಳೆಯವರ ಹೆಸರನ್ನಿಟ್ಟು ಅದನ್ನು ನಡೆಸಿದರೆ ತಮಗೂ ಸರ್ಕಾರಕ್ಕೂ ಗೌರವ ಹೆಚ್ಚುತ್ತದೆ ಎನ್ನುತಕ್ಕಂಥ ಸಲಹೆಯನ್ನು ಈ ಸಂದರ್ಭದಲ್ಲಿ ತಮ್ಮ ಮೂಲಕ ನಾನು ಕೊಟ್ಟು ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಹಕ್ಕುಚ್ಯುತಿ ಪ್ರಸ್ತಾವ

ವಿಷಯ: ಅಧಿವೇಶನಕ್ಕೆ ಮುನ್ನ 'ಕರ್ನಾಟಕ ಅಭಿವೃದ್ಧಿರಂಗ' ಎಂಬ ಹೆಸರಿನಲ್ಲಿ ಸರ್ಕಾರದ ಕಾರ್ಯಕ್ರಮಗಳನ್ನು ಪ್ರಕಟ ಮಾಡಿರುವ ಬಗ್ಗೆ.

+ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು): ಮಾನ್ಯ ಅಧ್ಯಕ್ಷರೆ, ನಿಯಮ ೧೯೧ರ ಅಡಿಯಲ್ಲಿ ಹಕ್ಕುಚ್ಯುತಿಗೆ ಸಂಬಂಧಪಟ್ಟ ಹಾಗೆ ನಾನೊಂದು notice ಅನ್ನು ಕೊಟ್ಟಿದ್ದೇನೆ. ತಾವು ಅಧಿವೇಶನವನ್ನು ಕರೆದಿದ್ದೀರಿ. ಸರ್ಕಾರ ಕೂಡ ಅದಕ್ಕೆ ಭಾಗಿಯಾಗಿದೆ. ಈ ಅಧಿವೇಶನವನ್ನು ಪ್ರಾರಂಭ ಮಾಡುವುದಕ್ಕೆ ೨೪ ಗಂಟೆ ಮುಂಚಿತವಾಗಿ ಗೌರವಾನ್ವಿತ ಮುಖ್ಯಮಂತ್ರಿಗಳು ಮತ್ತು ಉಪ

+ ಈ ಭಾಷಣವು ಮಾನ್ಯ ಸದಸ್ಯರಿಂದ ಪರಿಶೀಲಿಸಲ್ಪಟ್ಟಿದೆ.